# ಹಂಪಿ ಟೈಮ್ಸ್
HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY

ಸಂಪುಟ:01 • ಸಂಚಿಕೆ:333 • ನೋಂದಣಿ ನಂ.:KARKAN27911 • ವಿಜಯನಗರ • 06.06.2024 • ಗುರುವಾರ • ಪುಟ:04 • ಬೆಲೆ:2
Volume:01 • Issue:333 • Reg.No:KARKAN27911 • VIJAYANAGARA • 06.06.2024 • Thursday • Page:04 • Rs:2










**ಮೈಕ್ರೋ ನ್ಯೂಸ್**

## ಜೂನ್ 7 ರಿಂದ ಪ್ರಥಮ ಅಧಿವೇಶನದ ಇಲಾಖಾ ಪರೀಕ್ಷೆ

**ಹಂಪಿ ಟೈಮ್ಸ್ ಹೊಸಪೇಟೆ**

ಜೂನ್ 07 ರಿಂದ ಜೂನ್ 09ರವರೆಗೆ ನಡೆಯುವ 2024ನೇ ಸಾಲಿನ ಪ್ರಥಮ ಅಧಿವೇಶನದ ಇಲಾಖಾ ಪರೀಕ್ಷಾ ಕೇಂದ್ರವಾದ ಹೊಸಪೇಟೆಯ ಅಮರಾವತಿಯ ಚಿಂತಾಮಣಿ ಮಠದ ಹತ್ತಿರದ ಸರ್ಕಾರಿ ಬಾಲಕಿಯರ ಪ್ರೌಢಶಾಲೆಯ ಸುತ್ತಲು 200 ಮೀಟರ್ ಆವರಣವನ್ನು ನಿರ್ಬಂಧಿತ ಪ್ರದೇಶ ಎಂದು ಘೋಷಿಸಿ ಜಿಲ್ಲಾ ದಂಡಾಧಿಕಾರಿಗಳು ಆಗಿರುವ ಜಿಲ್ಲಾಧಿಕಾರಿಗಳಾದ ಎಂ.ಎಸ್.ದಿವಾಕರ ಅವರು ಆದೇಶ ಹೊರಡಿಸಿದ್ದಾರೆ.

ಪರೀಕ್ಷೆಗಳು ಸುಗಮವಾಗಿ ನಡೆಯುವ ಹಿತದೃಷ್ಠಿಯಿಂದ ಮತ್ತು ಪ್ರತಿ ಪರೀಕ್ಷಾ ಕೇಂದ್ರದ ವ್ಯಾಪ್ತಿಯಲ್ಲಿ ಶಾಂತಿ ಮತ್ತು ಸುವ್ಯವಸ್ಥೆಯನ್ನು ಕಾಪಾಡಿಕೊಂಡು ಬರುವ ಹಿತದೃಷ್ಠಿಯಿಂದ ಸಿ.ಆರ್.ಪಿ.ಸಿ ಕಾಯ್ದೆ 1973ರ ಕಲಂ 144ರನ್ವಯ ಪ್ರದತ್ತವಾದ ಅಧಿಕಾರದ ಮೇರೆಗೆ ಜಿಲ್ಲಾಧಿಕಾರಿಗಳು ಆದೇಶ ಹೊರಡಿಸಿದ್ದಾರೆ.

ಈ ಪರೀಕ್ಷಾ ಕೇಂದ್ರಗಳ ಸುತ್ತಲಿನ ಜೆರಾಕ್ಸ್ ಮತ್ತು ಕಂಪ್ಯೂಟರ್ ಸೈಬರ್ ಅಂಗಡಿಗಳನ್ನು ಮುಚ್ಚುವಂತೆ ಆದೇಶಿಸಲಾಗಿದೆ. ಮತ್ತು ಈ ಪ್ರದೇಶದಲ್ಲಿ ಅನಧೀಕೃತ ವ್ಯಕ್ತಿ ಮತ್ತು ವ್ಯಕ್ತಿಗಳ ಗುಂಪುಗಳಿಗೆ ಪ್ರವೇಶ ನಿಷೇಧಿಸಿದೆ. ಈ ಆದೇಶವು ಸದರಿ ಪರೀಕ್ಷಾ ಕಾರ್ಯನಿರ್ವಹಿಸುವ ಅಧಿಕಾರಿ ಸಿಬ್ಬಂದಿಗೆ ಅನ್ವಯಿಸುವುದಿಲ್ಲ ಎಂದು ಆದೇಶದಲ್ಲಿ ತಿಳಿಸಲಾಗಿದೆ.

## ಕೂಡ್ಲಿಗಿ ತಾಲೂಕಿನ 66 ಕೆವಿ ವಿದ್ಯುತ್ ಪ್ರಸರಣ ಮಾರ್ಗದ ವಿದ್ಯುತ್ತೀಕರಣ:

**ಹಂಪಿ ಟೈಮ್ಸ್ ಹೊಸಪೇಟೆ**

ವಿಜಯನರ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕಿನ ಬಡೆಲಡಕು ಗ್ರಾಮ ಸರಹದ್ದಿನಲ್ಲಿ ಸ್ಥಾಪಿತವಾದ 220/66/11ಕೆವಿ ವಿದ್ಯುತ್ ವಿತರಣ ಕೇಂದ್ರದಿಂದ ಸುಮಾರು 9.16 ಕಿ.ಮಿ. ಉದ್ದದ 66 ಕೆ.ವಿ. ವಿದ್ಯುತ್ ಪ್ರಸರಣ ಮಾರ್ಗವನ್ನು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದಿಂದ ಅಸ್ತಿತ್ವದಲ್ಲಿರುವ ಡಿಸಿ ಟವರ್‌ಗಳ ಮೇಲೆ ನಿರ್ಮಾಣ ಮಾಡಿದ್ದು, ಈ ವಿದ್ಯುತ್ ಪ್ರಸರಣ ಮಾರ್ಗವು ಕೂಡ್ಲಿಗಿ, ಬಡೆಲಡಕು, ತಪ್ಪಕ್ಕನಹಲ್ಲಿ, ನಾಗಲಾಪೂರ, ಗಂಗಮ್ಮನಹಳ್ಳಿ ಮತ್ತು ಸುಂಕದಕಲ್ಲು ಗ್ರಾಮಗಳ ವ್ಯಾಪ್ತಿಯಲ್ಲಿ ಹಾದುಹೋಗಿರುತ್ತದೆ. ಈ ಪ್ರಸರಣ ಮಾರ್ಗವನ್ನು ವಿದ್ಯುದ್ಧೀಕರಿಲಾಗುತ್ತಿರುವುದರಿಂದ ಸಾರ್ವಜನಿಕರು ಮಾರ್ಗದ ವಿದ್ಯುತ್ ಗೋಪುರಗಳನ್ನು ಹತ್ತುವುದಾಗಲಿ, ಅವುಗಳಿಗೆ ದನಕರುಗಳನ್ನು ಕಟ್ಟುವುದಾಗಲಿ, ಹಸಿರು ಬಳ್ಳಿ, ಗಿಡದ ಟೊಂಗೆಗಳನ್ನು ಅಥವಾ ಲೋಹದ ತಂತಿಗಳನ್ನು ಎಸೆಯುವುದಾಗಲಿ ಮಾಡಬಾರದು. ಎಂದು ಸಾರ್ವಜನಿಕರಿಗೆ ಎಚ್ಚರಿಕೆ ನೋಟೀಸ್ ನೀಡಲಾಗಿದೆ ಎಂದು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ಬಳ್ಳಾರಿ ಬೃಹತ್ ಕಾಮಗಾರಿ ವಿಭಾಗದ ಕಾರ್ಯನಿರ್ವಾಹಕ ಅಭಿಯಂತರರು ತಿಳಿಸಿದ್ದಾರೆ.

# ಗಿಡ ನೆಡಿ ಪ್ಲಾಸ್ಟಿಕ್ ತ್ಯಜಿಸಿ

## ಡಿಸಿ ಎಂ.ಎಸ್.ದಿವಾಕರ ಹೇಳಿಕೆ । ಅರಣ್ಯ ಇಲಾಖೆಯಿಂದ ವಿಶ್ವ ಪರಿಸರ ದಿನಾಚರಣೆ



**ಹಂಪಿ ಟೈಮ್ಸ್ ಹೊಸಪೇಟೆ**

ಹೆಚ್ಚುತ್ತಿರುವ ಕೈಗಾರೀಕರಣ ಮತ್ತು ನಾನಾ ಅಭಿವೃದ್ಧಿಕಾರ್ಯಗಳ ನಡುವೆ ಪರಿಸರ ಸಂರಕ್ಷಣೆ ಮಾಡುವ ಮೂಲಕ ಪರಿಸರ ಸಮತೋಲನ ಕಾಯ್ದುಕೊಳ್ಳಬೇಕಿದೆ. ಗಿಡಮರಗಳ ಸಂರಕ್ಷಣೆಯಲ್ಲಿ ನಿರ್ಲಕ್ಷ್ಯ ತೋರಿದರೆ ಮಲೀನ ಗಾಳಿ ಸೇವನೆಯಿಂದ ಅನಾರೋಗ್ಯಕ್ಕೆ ತುತ್ತಾಗಬೇಕಾಗಬಹುದು. ಅರೋಗ್ಯ ಸಮಾಜ ನಿರ್ಮಾಣ ಪ್ರತಿಯೊಬ್ಬರೂ ಕರ್ತವ್ಯ ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಹೇಳಿದರು.

ನಗರದ ಜಿಲ್ಲಾಡಳಿತ ಭವನದ ಆವರಣದಲ್ಲಿ ವಿಜಯನಗರ ಜಿಲ್ಲಾ ಪ್ರಾದೇಶಿಕ ಅರಣ್ಯ ವಿಭಾಗ ವಿಶ್ವ ಪರಿಸರ ದಿನಾಚರಣೆ ನಿಮಿತ್ತ ಹಮ್ಮಿಕೊಂಡಿದ್ದ ಸಸಿ ನೆಡುವ ಕಾರ್ಯಕ್ರಮದಲ್ಲಿ ಸಸಿನೆಟ್ಟು ಮಾತನಾಡಿದರು. ಗಿಡಮರಗಳ ನಾಶದಿಂದಾಗುವ ಅನಾನುಕೂಲತೆಗಳ ಕುರಿತು ಜನರಲ್ಲಿ ಅರಿವು ಹೆಚ್ಚಿಸಬೇಕು. ಭೂಮಿ, ನೀರು, ಗಾಳಿ ನಮ್ಮ ಜೀವನಕ್ಕೆ ಅತ್ಯಂತ ಅವಶ್ಯಕ, ನಮ್ಮ ಉಸಿರಿಗೆ ಆಸರೆಯಾಗಿರುವ ಪ್ರಕೃತಿಯನ್ನು ಉಳಿಸಿ ಬೆಳೆಸುವುದು ಎಲ್ಲರ ಜವಾಬ್ದಾರಿಯಾಗಿದೆ. ಪ್ರಕೃತಿಗೆ ಕುತ್ತಾಗಿರುವ ಪ್ಲಾಸ್ಟಿಕ್ ಬಳಕೆಯನ್ನು ಸ್ವಯಂಪ್ರೇರಿತವಾಗಿ ತ್ಯಜಿಸಬೇಕು. ಮಳೆಗಾಲ ಆರಂಭವಾಗಿದ್ದು ಸಸಿ ನೆಡಲು ಸಕಾಲವಾಗಿದೆ. ವಿದ್ಯಾರ್ಥಿಗಳ, ಯುವಜನರು, ಸಂಘ ಸಂಸ್ಥೆಗಳು ಅಭಿಯಾನದ ರೀತಿಯಲ್ಲಿ ಸಸಿ ನೆಟ್ಟು ಭೂತಾಯಿಯನ್ನು ಹಸಿರಾಗಿಸಬೇಕು ಎಂದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಿ.ಸದಾಶಿವ ಪ್ರಭು ಮಾತನಾಡಿ, ಗಿಡಮರ ಸಂರಕ್ಷಣೆ ಮಾಡುವುದು ಬರೀ ಇಲಾಖೆಗಳ ಕಾರ್ಯವಲ್ಲ, ಸಾರ್ವಜನಿಕರು ಸಹ ಅರಣ್ಯ ಸೇರಿದಂತೆ ವಿವಿಧ ಇಲಾಖೆಗಳ ಕಾರ್ಯಕ್ರಮದಲ್ಲಿ ಭಾಗಿಯಾಗಿ ಪರಿಸರ ಉಳಿವಿಗೆ ಕೈಜೋಡಿಸಬೇಕು. ವಿಜಯನಗರ ಜಿಲ್ಲೆಯಲ್ಲಿ ಪರಿಸರ ಸ್ನೇಹಿ ವಾತಾವರಣವಿದ್ದು, ಗಿಡ ಮರಗಳನ್ನು ಬೆಳಸಲು ಇಲ್ಲಿ ಹೆಚ್ಚಿನ ಅವಕಾಶವಿದೆ ಎಂದು ತಿಳಿಸಿದರು.

ಅಪರ ಜಿಲ್ಲಾಧಿಕಾರಿಗಳಾದ ಅನುರಾಧ ಜಿ ಸಸಿ ನೆಟ್ಟು ಮಾತನಾಡಿ, ನೀರು ಗಾಳಿ ಇಲ್ಲದೇ ಯಾರಿಗೂ ಸಹ ಬದುಕಲಾಗದು. ಶ್ರೀಮಂತ, ಬಡವ ಎನ್ನದೇ ಎಲ್ಲರಿಗೂ ಗಾಳಿ ನೀರು ಬೇಕಾಗುತ್ತದೆ. ಈ ಭೂಮಿಯಲ್ಲಿ ಎಲ್ಲರೂ ಒಂದೇ. ಪರಿಸರ ಸಂರಕ್ಷಣೆಯ ಕಾರ್ಯ ಎಂಬುದು ಸಂಘಟನಾತ್ಮಕವಾದ, ಸಮೂಹದಿಂದ ಆಗಬೇಕಾದ ಕಾರ್ಯವಾಗಿದೆ. ಇದು ಅವರ ಕಾರ್ಯ, ಅದು ನಮ್ಮ ಕಾರ್ಯ ಎನ್ನುವ ಯಾವುದೇ ಬೇಧ ಭಾವ ಮಾಡದೇ ಪ್ರತಿಯೊಬ್ಬರೂ ಪರಿಸರ ಸಂರಕ್ಷಣೆಯ ಕಾರ್ಯದಲ್ಲಿ ಭಾಗಿಯಾಗಬೇಕು. ಪರಿಸರ ಸಂರಕ್ಷಣೆಯ ಕಾರ್ಯಕ್ಕೆ ಸಾರ್ವಜನಿಕರು ಅಗತ್ಯ ಸಹಕಾರ ನೀಡಬೇಕು ಎಂದು ತಿಳಿಸಿದರು.

ವಿಜಯನಗರ ಜಿಲ್ಲೆಯ ಉಪ ಅರಣ್ಯ ಸಂರಕ್ಷಣಾಧಿಕಾರಿ ಅರ್ಸಲನ್, ಜಿಲ್ಲಾಧಿಕಾರಿಗಳ ಕಚೇರಿ, ಅರಣ್ಯ ಇಲಾಖೆಯ ಇನ್ನಿತರ ಅಧಿಕಾರಿಗಳು ಮತ್ತು ಸಿಬ್ಬಂದಿ ಇದ್ದರು.

# ನಗರ ಹಸಿರೀಕರಣಕ್ಕೆ ಎಂಎಸ್‌ಪಿಎಲ್ ಸಂಕಲ್ಪ

## ಸಿಎಸ್ಸಾರ್ ವಿಭಾಗದ ಮುಖ್ಯಸ್ಥ ಎಚ್.ಕೆ.ರಮೇಶ ಹೇಳಿಕೆ । ಸಸಿ ನೆಡುವ ಕಾರ್ಯಕ್ಕೆ ಡಿಸಿ ಚಾಲನೆ



**ಹಂಪಿ ಟೈಮ್ಸ್ ಹೊಸಪೇಟೆ**

ಈ ಬಾರಿ ಅತಿಹೆಚ್ಚು ಬಿಸಿಲಿನ ತಾಪಮಾನ ಕಂಡಿದ್ದೇವೆ. ಪ್ರತಿಯೊಬ್ಬರೂ ಈ ಮಳೆಗಾಲದ ಸಂದರ್ಭದಲ್ಲಿ ಸಸಿ ನೆಟ್ಟು ಪೋಷಿಣೆ ಮಾಡುವ ಮೂಲಕ ಪ್ರಕೃತಿ ಸ್ನೇಹಿಗಳಾಗಿ, ಪ್ರಕೃತಿ ಪುನಶ್ಚೇತನಕ್ಕೆ ಕೈಜೋಡಿಸಬೇಕು ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಹೇಳಿದರು.

ನಗರದ ಪುನೀತ್‌ರಾಜ್‌ಕುಮಾರ್ ಜಿಲ್ಲಾ ಕ್ರೀಡಾಂಗಣದಲ್ಲಿ ಪರಿಸರ ದಿನಾಚರಣೆ ನಿಮಿತ್ತ ಸ್ಥಳೀಯ ಎಂ.ಎಸ್.ಪಿ.ಎಲ್, ಭಾರತೀಯ ರೆಡ್‌ಕ್ರಸ್ ಸಂಸ್ಥೆ ಹಾಗೂ ಭಾರತೀಯ ಸ್ಕೌಟ್ಸ್ ಮತ್ತು ಗೈಡ್ಸ್ ಸಂಯುಕ್ತಾಶ್ರಯದಲ್ಲಿ ಸಸಿ ನೆಡುವ ಕಾರ್ಯಕ್ರಮಕ್ಕೆ ಬುಧವಾರ ಚಾಲನೆ ನೀಡಿ ಮಾತನಾಡಿದರು. ಈ ಹಿಂದೆ ಹಿರಿಯರು ನೆಟ್ಟ ಗಿಡಮರಗಳಿಂದ ನಾವುಗಳು ಗಾಳಿ ಪಡೆಯುತ್ತಿದ್ದೇವೆ. ನಮ್ಮ ಮುಂದಿನ ಪೀಳಿಗೆಗೆ ಮತ್ತು ಆರೋಗ್ಯಯುತ ಸಮಾಜ ನಿರ್ಮಾಣಕ್ಕಾಗಿ ಉತ್ತಮ ಪರಿಸರ ನೀಡುವ ಸಂಕಲ್ಪತೊಟ್ಟು ಪ್ರತಿಯೊಬ್ಬರು ತಮ್ಮ ಕೈಲಾದಷ್ಟು ಗಿಡನೆಡಬೇಕು ಎಂದರು.

ಎಂಎಸ್‌ಪಿಎಲ್ ಸಿಎಸ್ಸಾರ್ ವಿಭಾಗದ ಮುಖ್ಯಸ್ಥ ಎಚ್.ಕೆ.ರಮೇಶ ಮಾತನಾಡಿ, ಹೊಸಪೇಟೆಯನ್ನು ಹಸಿರೀಕರಣ ಮಾಡುವ ಸಂಕಲ್ಪದೊಂದಿಗೆ ನಗರದಾದ್ಯಂತ ಈಗಾಗಲೇ 20 ಸಾವಿರ ಗಿಡಗಳನ್ನು ನೆಟ್ಟು ಪೋಷಣೆ ಮಾಡಲಾಗಿದ್ದು, >>4

# ಪ್ರತಿ ಸವಿನೆನಪಿಗೊಂದು ಗಿಡ ನೆಡಿ

## ಕೊಂಡನಾಯಕನಹಳ್ಳಿ ಆಕ್ಸ್‌ಫರ್ಡ್ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಪರಿಸರ ದಿನಾಚರಣೆ

**ಹಂಪಿ ಟೈಮ್ಸ್ ಹೊಸಪೇಟೆ**




ನಗರದ ಕೊಂಡನಾಯಕಯನಹಳ್ಳಿಯ ಆಕ್ಸ್‌ಫರ್ಡ್ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಬುಧವಾರ ಪರಿಸರ ದಿನಾಚರಣೆ ನಿಮಿತ್ತ ಎಚ್.ಡಿ.ಎಫ್.ಸಿ ಬ್ಯಾಂಕಿನ ಅಧಿಕಾರಿಗಳು ಶಾಲಾ ಮಕ್ಕಳೊಂದಿಗೆ ಸಸಿ ನೆಟ್ಟು ಪರಿಸರ ದಿನಾಚರಣೆ ಆಚರಿಸಿದರು.

ಬ್ಯಾಂಕಿನ ಅಧಿಕಾರಿ ಬದರಿ ಪ್ರಸಾದ್ ಕುಲಕರ್ಣಿ ಮಾತನಾಡಿ, ಸಸಿ ನೆಟ್ಟು ನೀರೆರೆದು ಪೋಷಿಸಬೇಕು. ಗಿಡ ಮರಗಳ ಸಂರಕ್ಷಣೆ ನಮ್ಮೆಲ್ಲರ ಹೊಣೆ. ಆರೋಗ್ಯಕರ ಜೀವನ ನಡೆಸಲು ಉತ್ತಮ ಗಾಳಿ ಅತ್ಯವಶ್ಯ. ಮರಗಿಡಗಳಿದ್ದರೆ ಉತ್ತಮ ಗಾಳಿಯನ್ನು ಪಡೆಯಲು ಸಾಧ್ಯ. ಗಿಡಮರಗಳನ್ನು ಕಡಿಯುವುದನ್ನು ತಡೆಯಬೇಕು. ಪ್ರತಿ ಸವಿನೆನಪಿಗೂ ಗಿಡ ನೆಡುವ ರೂಢಿ ಬೆಳೆಸಿಕೊಳ್ಳಬೇಕು ಎಂದರು.

ಶಾಲಾ ಅಧ್ಯಕ್ಷ ಬಿ.ಮಹೇಶ ಅಧ್ಯಕ್ಷತೆವಹಿಸಿ ಮಾತನಾಡಿ, ಬೇಸಿಗೆ ಕಾಲದಲ್ಲಿ ನೆರಳು ಹುಡುಕುವ ಬದಲಿಗೆ ಮಳೆಗಾಲದಲ್ಲಿ ಗಿಡ ನೆಟ್ಟರೆ ಅನೇಕರಿಗೆ ನೆರಳು ಕೊಟ್ಟಂತಾಗುತ್ತದೆ. ನಮ್ಮೆಲ್ಲರ ಉಸಿರಾಗಿರುವ ಪ್ರಕೃತಿಯನ್ನು ಪೂಜಿಸಬೇಕು ಎಂದರು.

ಶಾಲಾ ಮುಖ್ಯಗುರು ಸುಜಾತ ಓಜನಹಳ್ಳಿ, ಎಚ್.ಡಿ.ಎಫ್.ಸಿ ಬ್ಯಾಂಕಿನ ಅಧಿಕಾರಿಗಳಾದ ಆನಂದ್ ನಗರಿಸ, ಶಶಿಕಲಾ, ನವೀನ್, ಮಂಜುನಾಥ್ ವಿ. ಸೇರಿದಂತೆ ಶಾಲಾ ಸಿಬ್ಬಂದಿ, ಮಕ್ಕಳು ಇದ್ದರು. ಇದೇ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ಸಿಹಿ ವಿತರಿಸಲಾಯಿತು.

# ವಿವಿಧೆಡೆ ಸಸಿ ನೆಟ್ಟು ಪರಿಸರ ಸಂರಕ್ಷಣೆ ಜಾಗೃತಿ



ಹೊಸಪೇಟೆಯಲ್ಲಿ ಜಗದ್ಗುರು ಶ್ರೀ ಕೊಟ್ಟೂರು ಬಸವಲಿಂಗ ಮಹಾಸ್ವಾಮಿಗಳು ಪರಿಸರ ದಿನಾಚರಣೆಯಂಗವಾಗಿ ಸಿಸಿ ನೆಟ್ಟು, ಮಕ್ಕಳಿಗೆ ಅಕ್ಷರಭ್ಯಾಸ ಮಾಡಿಸಿ, ಪಾಲಕರಿಗೆ ಸಸಿ ವಿತರಿಸಿದರು. ಸಮಾಜದ ಹಿರಿಯ ಮುಖಂಡ ಸಾಲಿಸಿದ್ದಯ್ಯಸ್ವಾಮಿ ಇತರರು ಇದ್ದರು.



**ಹಂಪಿ ಟೈಮ್ಸ್ ಹೊಸಪೇಟೆ**

ಹೊಸಪೇಟೆಯ ತಾಲೂಕು ಆರೋಗ್ಯ ಇಲಾಖೆಯಿಂದ ತಾಲೂಕಿನ ಸಾರ್ವಜನಿಕ ಆಸ್ಪತ್ರೆಯ ಆವರಣದಲ್ಲಿ ಬುಧವಾರ ವಿಶ್ವ ಪರಿಸರ ದಿನ ಆಚರಿಸಲಾಯಿತು.

'ಭೂಮಿ ಮರುಸ್ಥಾಪನೆ, ಮರುಭೂಮೀಕರಣ ಮತ್ತು ಬರ ಸ್ಥಿತಿ ಸ್ಥಾಪಕತ್ವ ಧ್ಯೇಯವಾಕ್ಯದಡಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಆರೋಗ್ಯ ಇಲಾಖೆಯ ವಿವಿಧ ವಿಭಾಗಗಳ ವೈದ್ಯಾಧಿಕಾರಿಗಳು ಮತ್ತು ಸಿಬ್ಬಂದಿ ಸೇರಿ ಆವರಣದಲ್ಲಿ ಸಸಿ ನೆಟ್ಟರು.


ಈ ವೇಳೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಾದ ಡಾ.ಶಂಕರ್ ನಾಯ್ಕ್, ಸಾರ್ವಜನಿಕ ಆಸ್ಪತ್ರೆಯ ಶಸ್ತ್ರಚಿಕಿತ್ಸಕರಾದ ಡಾ.ಸಲೀಂ, ವೈದ್ಯಾಧಿಕಾರಿಗಳಾದ ಡಾ.ಕಮಲಮ್ಮ , ಆರೋಗ್ಯ ಇಲಾಖೆ ದೊಡ್ಡಮನಿ, ಎಂ.ಧರ್ಮನಗೌಡ ಸೇರಿದಂತೆ ವಿವಿಧ ಆರೋಗ್ಯ ಕಾರ್ಯಕ್ರಮಗಳ ಅನುಷ್ಠಾನಾಧಿಕಾರಿಗಳು, ಹೊಸಪೇಟೆಯ ತಾಲೂಕು ಆರೋಗ್ಯ ಅಧಿಕಾರಿಗಳು, ಆರೋಗ್ಯ ಇಲಾಖೆಯ ಸಿಬ್ಬಂದಿ ಇದ್ದರು.

# ಅಕ್ಕನ ಬಳಗದಿಂದ ಪರಿಸರ ದಿನಾಚರಣೆ



ಹೊಸಪೇಟೆ ಅಕ್ಕನ ಬಳಗದ ಸದಸ್ಯರು ಪರಿಸರ ದಿನಾಚರಣೆಯ ನಿಮಿತ್ತ ಬುಧವಾರ ನಗರದ ಸಮುದಾಯ ಭವನ ಮತ್ತು ಮನೆಗಳ ಸುತ್ತ ಮುತ್ತ ಸಸಿ ನೆಟ್ಟು ಪರಿಸರ ದಿನಾಚರಣೆ ಆಚರಿಸಿದರು.ಅಕ್ಕನಬಳಗದ ಅಧ್ಯಕ್ಷರಾದ ಪ್ರಭಾ ಒ ಸಿಂದಗಿ, ಕಾರ್ಯದರ್ಶಿ ವನಿತಾ ಶಿವಶಂಕರ್, ಪದಾಧಿಕಾರಿಗಳಾದ ಗಂಗಮ್ಮ ಕೊತ್ತಂಬರಿ, ಭಾರತಿ ದಿನೇಶ್, ಕೆ. ಗಂಗಮ್ಮ ಹಾಗೂ ಸಮಾಜದ ಮುಖಂಡರು ಇದ್ದರು.

## ಮನೆ ಬಾಗಿಲ ಸೇವೆಗೆ ಚೌಕಾಸಿ..!



ಮೊನ್ನೆ ನಾನು ತರಕಾರಿ ತರಲು ಹೋಗಿದ್ದೆ ಅಲ್ಲಿ 5 ರೂಪಾಯಿ ಪ್ರತಿ ಕಟ್ಟಿನ ಬೆಲೆ, ಆದ್ರೂ ಯಾಕಪ್ಪ ಇಷ್ಟೊಂದು ದುಬಾರಿ ಕೊಡ್ತೀಯಾ? ಅಂತ್ತ ಕೇಳ್ದೆ..ನಿನ್ನೆಯ ದಿನ ನನ್ನ ಮಗಳು ಅದೇ ತರಕಾರಿ 25 ರೂಪಾಯಿಗೆ ಒಂದು ಕಟ್ಟು ತಂದು ಅಮ್ಮ ಅತೀ ಕಡಿಮೆ ಬೆಲೆಗೆ ಕೊಟ್ಟಿದ್ದಾರೆ ಅಂದ್ಲು.ಇಂದು ನಮ್ಮ ಮನೆಯ ಬಾಗಿಲಿಗೆ ರೈತನೊಬ್ಬ ಬಂದು ವಿಧವಿಧವಾದ ಹಸಿರಾದ ತರಕಾರಿ ತಂದು ಮಾರುತ್ತಿದ.

ಅದರಲ್ಲಿ ಪಕ್ಕದ ಮನೆಯ ಲತಾ ಕೇಳಿದಳು ಏನ್ರಿ ನಂದಿನಿ ಮೇಡಂ ನೀವು ಹೀಗೆಲ್ಲ ರಸ್ತೆಗಳಲ್ಲಿ ಮಾರಾಟ ಮಾಡುವ ರೈತರ ಹತ್ತಿರ ತರಕಾರಿ ಖರೀದಿ ಮಾಡುತ್ತೀರಾ? ಅಯ್ಯೋ ನಮ್ಮ ಇಮೇಜ್ ಹೋಗುತ್ತೆ ರಿ.. ನಾನು ಮಾತ್ರ ತರಕಾರಿಯಿಂದ ಹಿಡಿದು ಕೊಲಡ್ರಿಂಕ್ಸ್, ಚಪ್ಪಲಿ, ಬಟ್ಟೆ, ಹೀಗೆ ಬ್ಯೂಟಿ ಪಾರ್ಲರ್, ಸಿನಿಮಾ ಕೂಡ ಅಲ್ಲೆ. ಇತ್ತ ಹಳ್ಳಿಯಿಂದ ತರಕಾರಿ ಮಾರಲು ಬಂದ ರೈತ ಗಾಬರಿಇಂದ ಕೇಳಿದ ಅಮ್ಮ ನನಗೆ ತುಂಬಾ ಹುಷಾರಿಲ್ಲ ಮಾಲ್ ನಲ್ಲಿ ಯಾವ ಡಾಕ್ಟರ್ ಇದಾರೆ ಬೇಗ ಹೇಳಿ? ಇನ್ನು ಮುಂದೆ ನಾನೂ ಪ್ರತಿ ಖರೀದಿಗೂ ಮಾಲ್ ಗೆ ಹೋಗುವೆ. ಅಷ್ಟರಲ್ಲಿ ಆ ಕಡೆಯಿಂದ ಸರಸ್ವತಿ ಒಂದು ಕಟ್ಟು ಪಾಲಕ್ ಸೊಪ್ಪು ಹಾಗೂ ಟೊಮ್ಯಾಟೋ ತಗೊಂಡು ಕಾರ್ ನಿಂದ ಇಳಿದು ನಮ್ಮ ಕಡೆ ಬಂದಳು, ಎಲ್ಲಿಗೆ ಹೋಗಿದ್ದೀರಾ? ಅಂತ ಕೇಳಿದಾಗ ತರಕಾರಿ ತರಲು ಮಾಲ್ ಗೆ ಹೋಗಿದ್ದೆ ಕಣೆ. ಒಂದು ಕಟ್ಟು ಪಾಲಾಕಿನ ಸೊಪ್ಪು 25 ರೂಪಾಯಿ, ಕೆಜಿ ಗೆ 100 ರೂಪಾಯಿ ಟೊಮೇಟೊ ತಂದಿದ್ದೀನಿ ಅಂದಳು. ರೈತ ಗಾಬರಿ ಗೊಂಡು ಅಲ್ಲ ತಾಯಿ ನಾವು ಬೆಳೆದು ನಿಮ್ಮ ಬಾಗಿಲವರೆಗೆ ತಂದ ಪಲಾಕೂ ಸೊಪ್ಪಿನ ಬೆಲೆ ಕೇವಲ ?5 ಕಣಮ್ಮ. ಮಾಲ್ ಗಳಲ್ಲಿ ಇಷ್ಟು ದುಬಾರಿ ಬೆಲೆಗೆ ಯಾಕೆ? ಅಲ್ಲಿ ಎಲ್ಲವೂ ಫ್ರೆಶ್ ಮತ್ತು ಹೈಜಿನ್ ಇರೋದು.ನಿನಗೇನು ಗೊತ್ತು ಕಣಪ್ಪ? ನಾವು ಡಿಗ್ರಿ ಆದವರು ನಮ್ಮ ಸ್ಟೇಟಸ್ ಮೆಂಟೈನ್ ಮಾಡಬೇಕು ಗೊತ್ತಾ? ಅಲ್ಲ ಮಾ ವಿಷಪುರಿತ ಕೆಮಿಕಲ್ ಹಾಕಿದ ಎಷ್ಟೋ ತಿಂಗಳುಗಟ್ಟಲೆ ಪ್ಯಾಕ್ ಮಾಡಿಟ್ಟ ಆಹಾರ ಹಿಂದೆ ಮುಂದೆ ಯೋಚನೆ ಮಾಡದೆ ಮಾಲ್ಗಳಲ್ಲಿ ಹಣ ಸುರಿತಿವಿ ಇಮೇಜ್ಗಾಗಿ.ಉತ್ತಮ ಆರೋಗ್ಯಕ್ಕೆ ಫ್ರೆಶ್ ಇರುವ ಹಸಿರು ತರಕಾರಿ ಹಾಗೂ ಹಣ್ಣುಗಳು ಬೇಕು ಇವುಗಳಿಗೆ ಬೆಲೆ ಕಟ್ಟಲು ಸಾಧ್ಯ ಇಲ್ಲ ಇವುಗಳ ಬಗ್ಗೆ ಮನವರಿಕೆ ಮಾಡಿಕೊಡುವುದು ಪಾಲಕರ ಜವಾಬ್ದಾರಿ. ಆದರೆ ಎಷ್ಟೋ ಆಹಾರ ವಿಷಪೂರಿತ ಪದಾರ್ಥಗಳು ರಾಸಾಯನಿಕಗಳಿಂದ ಕೂಡಿದ್ದು, ಬಣ್ಣ ಬಣ್ಣದ ಪೊಟ್ಟಣಗಳಲ್ಲಿ ನಮ್ಮನ್ನು ಆಕರ್ಶಿಸುವಂತ್ತೆ ಪ್ಯಾಕ್ ಮಾಡಿ ಮಾರುತ್ತಿರುವರು. ಚಾಕಲೇಟ್, ಕೋಲ್ಡ್ ಡ್ರಿಂಕ್ಸ್, ಫಾಸ್ಟ್ ಫುಡ್ ಯಾಕೆ ಬೇಕು ಮಾ? ಮಕ್ಕಳಿಗೆ ಬೇಕಾಗುವ ಪಾನಕ, ರುಚಿರುಚಿಯಾದ ತಿಂಡಿ ತಿನಿಸು,ತರಕಾರಿ ಕಾಳುಗಳನ್ನು ತಿನಿಸಿ ಮಾ ಅಂದಾಗ. ಏನಯ್ಯ ಹಳ್ಳಿಯವ ನಿನಗೆ ಕೆಮಿಕಲ್ ಜಂಕ್ ಫುಡ್ ಬಗ್ಗೆ ಇಷ್ಟೆಲ್ಲಾ ಗೊತ್ತಾ? ಆಗ ರೈತ ಹೇಳಿದ ಮಾ ನಾನು ಛಿಥಿ ಓದಿದ್ದು, ಫಾಸ್ಟ್ ಫುಡ್ ಆಹಾರ ತಯಾರಿಸುವ ಪ್ರತಿಷ್ಠಿತ ಕಂಪನಿಯಲ್ಲಿ ಕೆಲಸ ಮಾಡುತಿದ್ದೆ. ಆಹಾರ ತಯಾರಿಸುವಾಗ ಬಳಸುವ ವಿಪುರಿತ ಕೆಮಿಕಲ್ ಬಳಕೆ ನೋಡಿ ಲಕ್ಷಗಟ್ಟಲೆ ಸಂಬಳ ತೆಗೆದುಕೊಳ್ಳುವ ಬದಲು, ನಮ್ಮ ಗ್ರಾಮಕ್ಕೆ ಬಂದು, ಸಾವಯವ ಕೃಷಿ ಇಂದ ಬೆಳೆ ತರಕಾರಿಗಳನ್ನು ಬೆಳೆದು, ಮನೆ ಮನೆಗೆ ಬಂದು ತರಕಾರಿ ಮಾರುವದರಲ್ಲಿ ತೃಪ್ತಿ ಇದೆ ಮಾ.

ಹಿಂದೆ ಮುಂದೆ ಯೋಚಿಸದೆ ಎಷ್ಟೆ ಬೆಲೆಯಾದರೂ ಸರಿ ಮಾಲ್ ನಲ್ಲಿ ಹೋಗಿ ತರುತ್ತಿದ್ದೇವೆ. ತರಕಾರಿ ಕೂಡ ಮಾಲ್ಗಳ್ಳಲ್ಲೆ.ಆದ್ರೆ ಅದೇ ರೈತ ಮಾರುಕಟ್ಟೆಗೆ, ಮನೆ ಬಾಗಿಲಿಗೆ ಬಂದು ತರಕಾರಿ ಮಾರುತಿರವಾಗ ರೂಪಾಯಿಗೆ ವಾದ ಮಾಡುತ್ತೇವೆ. ಇದು ಯಾವ ನ್ಯಾಯ. ರೈತನ ಸ್ಥಾನದಲ್ಲಿ ನಿಂತ್ತು ನೋಡಿ ಅವರ ನೋವು ಏನು ಅಂತ. ಎಲ್ಲವೂ ಆಡಂಬರ. ನಮ್ಮ ಜೀವನದಲ್ಲಿ ಆಡಂಬರಕ್ಕೆ ಒತ್ತು ನೀಡದೇ ನೈಜತೆಗೆ ಒತ್ತು ನೀಡಿದಾಗ ಬದುಕು ಅರ್ಥಪೂರ್ಣ ಎನಿಸುತ್ತದೆ. ಎಲ್ಲವೂ ನಮ್ಮ ಯೋಚನೆಗೆ ಬಿಟ್ಟಿದ್ದು.ಸಹಜತೆ.ನೈಜತೆ.ನಮ್ಮ ಜೀವನ ಆಗಬೇಕಲ್ಲವೇ.?

**– ನಂದಿನಿ ಸನಬಾಳ್ ಶಿಕ್ಷಕಿ ಪಾಳಾ ಕಲಬುರಗಿ ಜಿಲ್ಲೆ**

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**

– ಜಾಹೀರಾತು ವ್ಯವಸ್ಥಾಪಕರು.

# ಲಬೊಸಾದಲ್ಲಿ ಒಂದು ದಿನ



ರಹಮತ್ ತರೀಕೆರೆ
ಲೇಖಕರು, ಸಂಸ್ಕೃತಿ ಚಿಂತಕರು

Hampi Times E-paper
SCAN AND READ

ನನಗೆ ಸಾವಿರಾರು ವರ್ಷಗಳಿಂದಲೂ ಬೌದ್ಧಧಮ್ಮವು ಜೀವಂತವಾಗಿ ನೆಲೆಸಿರುವ ಸಮಾಜವನ್ನು ನೋಡಬೇಕಿತ್ತು. ಭಾರತದಲ್ಲಿ ಅದು ಪಳೆಯುಳಿಕೆಗಳಿಂದ ಮೇಲೆದ್ದು ಹೊಸತಾಗಿ ಮೊಳೆಯುತ್ತಿರುವ ಚಿಗುರು. ಕಾಂಬೋಡಿಯಾ ಲಂಕಾ ಮ್ಯಾನ್ಮಾರ್ ಭೂತಾನಗಳಲ್ಲಿ ಧಮ್ಮವು ಹೀಗೆ ಆಳವಾಗಿ ಬೇರುಬಿಟ್ಟಿದೆ. ಅದರ ಒಂದು ವರ್ಣರಂಜಿತ ಅಧ್ಯಾಯವನ್ನು ಕಾಣಲು ಭೂತಾನಕ್ಕೆ ಹೋದೆನು.

ಭೂತಾನವು ಹಿಮಾಲಯ ಶ್ರೇಣಿಯಲ್ಲಿ ಬರುವ ಪುಟ್ಟ ದೇಶ. ಪೂರ್ವಕ್ಕೆ ಚೀನಾಗಡಿಯಲ್ಲಿ ಕಾಂಚನಜುಂಗ್ ಇತ್ಯಾದಿ ಹಿಮಪರ್ವತಗಳ ನೂರಾರು ಮೈಲಿಯುದ್ದದ ಶ್ರೇಣಿ. ಆದರೆ ಭಾರತ-ಭೂತಾನ ಗಡಿಯೆಂದರೆ ಬಯಲು-ಬೆಟ್ಟಗಳ ಸಂಗಮ. ಭೂತಾನವು ಒಂದು ಭೂಬಂಧಿತ (ಲ್ಯಾಂಡ್ ಲಾಕ್ಡ್) ದೇಶ. ಅದರ ದುರ್ಗಮ ಭೌಗೋಳಿಕತೆಯೇ ಅದನ್ನು ಒಂಟಿಯಾಗಿಸಿದೆ ಮತ್ತು ತನ್ನತನ ಉಳಿಸಿಕೊಳ್ಳಲು ನೆರವಾಗಿದೆ. ಆದರೂ ಅದರ ಬಯಲಿಗೆ ಲಗತ್ತಾಗಿರುವ ಭಾರತ ನೇಪಾಳಗಳ ಪ್ರಭಾವವು ಬೇಕಾದಷ್ಟು ಒಳನುಗ್ಗಿದೆ. ಭೂತಾನವು ಟಿಬೆಟ್ ಭಾರತ ನೇಪಾಳಗಳಿಂದ ಬೌದ್ಧಧರ್ಮದ ವಿವಿಧ ಧಾರೆಗಳನ್ನು ಸ್ವೀಕರಿಸಿದೆ. ಗುರುರಿಂಪೋಚೆ ಭಾರತದಿಂದ ಹೋದವನು. ನೇಪಾಳದಿಂದ ನಾಥಪಂಥದೊಂದಿಗೆ ಸಂಗಮಗೊಂಡಿರುವ ವಜ್ರಯಾನಿ ಧಮ್ಮವು ಹೋಗಿದೆ. ಇವೆರಡರ ಜತೆ ಬೌದ್ಧೀಕರಣಗೊಂಡ ಸ್ಥಳೀಯ ಜನಪ್ರಿಯ ಸಂತಪರಂಪರೆಯೂ ಇದೆ. ಹೀಗಾಗಿ ಇಲ್ಲಿ ಬುದ್ಧಿಸಂನ ಮೂರು ಧಾರೆಗಳೂ ಅವಕ್ಕೆ ಸಂಬಂಧಿಸಿದ ಸ್ತೂಪಗಳೂ ಇವೆ.

ಭೂತಾನದಲ್ಲಿ ಧಮ್ಮಕ್ಕೆ ಸಂಬಂಧಿಸಿದಂತೆ ಎದ್ದು ಕಾಣುವ ಕುರುಹುಗಳೆಂದರೆ, ವರ್ಣರಂಜಿತವಾದ ಚಿತ್ರಕಲೆಯಿಂದಲೂ ಮೂರ್ತಿಗಳಿಂದಲೂ ಕೂಡಿದ ಬೃಹದಾಕಾರದ ವಿಹಾರಗಳು ಮತ್ತು ಎತ್ತರದ ಪರ್ವತಗಳ ಮೇಲೆ ಸ್ಥಾಪಿಸಲಾದ ಬೃಹದಾಕಾರದ ಬುದ್ಧನ ಮೂರ್ತಿಗಳು. ಇಲ್ಲಿ ಸ್ತೂಪ ಮತ್ತು ವಿಹಾರಗಳನ್ನು ನದಿಗಳ ದಡದ ಮೇಲೆ ಕಟ್ಟಲಾಗಿದೆ. ಭೂತಾನದ ಪ್ರತೀಕವೆಂಬಂತೆ ಇರುವ ಪುನೇಖಾದ ಮಹಾವಿಹಾರವು ಎರಡು ದಿಕ್ಕಿನಿಂದ ಬರುವ ನದಿಗಳು ಕೂಡುವ ತಾಣದಲ್ಲಿದೆ. ಇವು ಗಂಡುಹೆಣ್ಣು ಹೊಳೆಗಳಂತೆ. ಈ ನದಿಯಲ್ಲಿ ಮೀನು ಹಿಡಿಯುವಂತಿಲ್ಲ. ಮೀನು ಬೌದ್ಧರಲ್ಲಿ ಪ್ರಜ್ಞಾವಂತಿಕೆಯ ಸಂಕೇತ. ಅದರ ಚಿತ್ರಗಳನ್ನು ವಿಹಾರಗಳಲ್ಲಿ ನೋಡಬಹುದು. ಗಂಡುಹೆಣ್ಣು ಮಿಲನದ ಕಥೆಗಳು



ಬೌದ್ಧಚಿತ್ರಗಳಲ್ಲೂ ಮೂರ್ತಿ ಶಿಲ್ಪದಲ್ಲೂ ಇದೆ. ತಾಂತ್ರಿಕ ಪಂಥವೊಂದು ನಿಸರ್ಗವನ್ನೂ ಮಿಲನದ ರೂಪಕಗಳಲ್ಲಿ ಕಂಡಿದೆ. ಟಿಬೆಟ್ಟಿನ ರಾಣಿ ಪದ್ಮಸಂಭವನನ್ನು ಪ್ರೇಮಿಸಿ ಹೆಣ್ಣು ಹುಲಿಯಾದಳು. ಅವಳನ್ನು ಸವಾರಿಸಿಕೊಂಡು ಪದ್ಮಸಂಭವ ಭೂತಾನಕ್ಕೆ ಬಂದನಂತೆ. ಇಲ್ಲಿನ ಗವಿಗಳಲ್ಲಿ ವಿಹಾರದ ಚಿತ್ರಗಳಲ್ಲಿ ಜಾನಪದಲ್ಲಿ ನಿರೂಪಿತವಾಗಿರುವ ಮಿಲರೇಪನ ಕತೆಗಳು ಬಿಂಬಿತವಾಗಿವೆ. ಇವನ್ನು ಆಲಿಸುವಾಗ ಭಾರತವೂ ಭೂತಾನವೂ ಒಂದೇ ಪರಂಪರೆ ಹಂಚಿಕೊಂಡ ನಾಡುಗಳು. ಕ್ರೌಂಚವಧೆಗಾಗಿ ಮರುಗಿದ ವಾಲ್ಮೀಕಿಯಂತೆ, ಪಾರಿವಾಳವನ್ನು ಉಳಿಸಲು ಮೈಯ ಮಾಂಸಕೊಟ್ಟ ಜೀಮೂತವಾಹನನಂತೆ, ಮಿಲರೇಪನು ಜಿಂಕೆಯನ್ನು ಬೇಟೆಗಾರನಿಂದ ಉಳಿಸಿದವನು. ಇದರ ಜೀವ ತೆಗೆಯುತ್ತಿರುವ ನಿನ್ನ ಜೀವವೂ ಒಂದು ದಿನ ಹೋಗುತ್ತೆ ಮರೆಯದಿರು ಎಂದವನು. ಕೊಂದವರುಳಿದರೇ ಕೂಡಲಸಂಗಮದೇವಾ ಎಂಬ ಪ್ರಶ್ನೆಯನ್ನು ಶರಣರು, ಅಜಯಾಗ ಮಾಡುವವರ ಮುಂದಿಟ್ಟಿದ್ದರು. ಜಿಂಕೆ ಕರುಣೆ ತ್ಯಾಗದ ಸಂಕೇತವಾಗಿ ಭೂತಾನಿನ ಎಲ್ಲೆಲ್ಲೂ ಚಿತ್ರಿತವಾಗಿದೆ.

ಭೂತಾನದಲ್ಲಿ ಎರಡು ಪರ್ವತಗಳ ಸಂದಿನಲ್ಲಿ ನೀರು ಹರಿವ ಜಾಗದಲ್ಲಿ ಕಟ್ಟಲಾದ ಚಚ್ಚೌಕದ ಕಟ್ಟಡಗಳಿವೆ. ಇಲ್ಲಿ ಬೀಳುವ ನೀರರಭಸಕ್ಕೆ ತಿರುಗಣಿಯ ಚಕ್ರ ತಿರುಗುತ್ತದೆ. ಇದಕ್ಕೆ ಲಗತ್ತಾಗಿರುವ ಯಂತ್ರದ ಮೇಲೆ ಬೌದ್ಧಮಂತ್ರ ಬರೆದ ಸಿಲಿಂಡರ್ ಜೋಡಿಸಲಾಗಿದೆ. ಮಂತ್ರದ ಸಿಲಿಂಡರಿನಿಂದ ಬೀಳುವ ನೀರನ್ನು ಪವಿತ್ರವೆಂದು ಕುಡಿಯಲಾಗುವುದು. ಈ ಯಂತ್ರಗಳು ಹಳ್ಳಿಗರಿಗೆ ಹಿಟ್ಟು ಬೀಸಾಣಿಕೆಗೂ ಬಳಕೆಯಾಗುತ್ತಿರಬೇಕು. ಈ ನೀರಮನೆಗಳು ಲೌಕಿಕ-ಧಾರ್ಮಿಕಗಳು ಬೆರೆವ ಪರಿಗೆ ಸಾಕ್ಷಿಯಂತಿದ್ದವು. ವಿಹಾರಗಳಲ್ಲಿ ಬೌದ್ಧ ಮಂತ್ರಬರೆದ ಸಿಲಿಂಡರನ್ನು ತಿರುಗಿಸುವುದು ಗುಡಿಯಲ್ಲಿ ಗಂಟೆ ಬಾರಿಸಿದಂತೆ. ಮುಸ್ಲಿಮರು ನಮಾಜಿನಲ್ಲಿ ಸಿಜ್ದಾ ಮಾಡುವಂತೆ. ಇಲ್ಲಿನ ಬೀದಿತುದಿಯಲ್ಲಿ ವಿಹಾರಗಳ ಜಗುಲಿಗಳ ಮೇಲೆ ಕೂತ ವೃದ್ಧರು, ಗಿಲಕಿಯಂತಹ ಮಂತ್ರದ ಸಿಲಿಂಡರ್ ತಿರುಗಿಸುವ ಇಲ್ಲವೆ ಜಪಮಣಿ ಎಣಿಸುವ ದೃಶ್ಯಗಳು ಸಾಮಾನ್ಯ. ಭೂತಾನದ ಮನೆಗಳ ಮುಂದೆ ಸಾಂಪೊ ಎನ್ನಲಾ ಗುವ ಹೂಜಿಯಾಕಾರದ ಹೊಗೆ ಗೂಡುಗಳಿವೆ. ಇವುಗಳಲ್ಲಿ ಬೆಳಬೆಳಗ್ಗೆಯೇ ಸುಗಂಧದ ಚಕ್ಕೆ ಅಥವಾ ದೇವದಾರು ಗಿಡದ ಎಲೆಗಳನ್ನಿಟ್ಟು ಧೂಪದಂತೆ ಪವಿತ್ರ ಹೊಗೆ ಎಬ್ಬಿಸುವರು. ಈ ಹೊಗೆ ಹತ್ತಿಯ ಎಳೆಯಂತೆ ಹರಡಿದ ತಂಪು ಹವೆಯ ಭಾರತವನ್ನು ಸೀಳಿಕೊಂಡು ಮೆಲ್ಲಗೆ ಮೇಲೇರುತ್ತ, ರೇಷ್ಮೆಯ ಬಿಳಿಪತ್ತಲವು ಆಗಸದಲ್ಲಿ ಹಾರಾಡುತ್ತಿರುವಂತೆ ಭಾಸವಾಗುತ್ತದೆ. ಇದು ಊರಿಗೇ ಬೆಂಕಿಬಿದಂತೆ ತೋರುತ್ತದೆ. ಬುದ್ಧನಿಗೆ ತುಪ್ಪದದೀಪ ಹಚ್ಚುವ, ಚಳಿಗೆ ಕೆಂಡಕಾಸುವ, ಪವಿತ್ರ ಹೊಗೆಹಾಕುವ ಆಚರಣೆ ಗಳಲ್ಲಿ ಮನೆ ಮಠಗಳು ಭಸ್ಮವಾಗಿರುವ ನಿದರ್ಶನ ಗಳೂ ಉಂಟು.

ಭೂತಾನದಲ್ಲಿ ಸತ್ತವರ ಹೆಸರಲ್ಲಿ ಮಂತ್ರ ಬರೆದ ಪತಾಕೆಗಳನ್ನು ಕಟ್ಟುವ ಪದ್ಧತಿಯಿದೆ. ಪರ್ವತಗಳ ಶಿಖರಗಳಲ್ಲಿ ತೋರಣ ಗಳಂತೆ ಕಟ್ಟಿದ ಮಂತ್ರಯುಕ್ತ ಪಟಗಳೂ ಇವೆ. ಗಾಳಿ ಬಿಸಿಲು ಮಳೆ ಹಿಮಪಾತಗಳಿಗೆ ಸಿಲುಕಿ ಅವುಗಳ ಅಕ್ಷರ ಬಣ್ಣವೆಲ್ಲ ಅಳಿದು, ಅವನ್ನು ಕಟ್ಟಿಸಿಕೊಂಡ ಪರ್ವತಗಳು, ಲಂಗರುಹಾಕಿದ ಹಾಯಿ ಹಡಗುಗಳಂತೆ ತೋರುತ್ತವೆ. ಇಲ್ಲಿ ಸಂತರ ಅಸ್ಥಿಅವಶೇಷಗಳನ್ನು ಕರಂಡಕದಲ್ಲಿಟ್ಟು ಕಟ್ಟುವ ಸ್ತೂಪಗಳಿವೆ. ಭೂತಾನದ ರಾಣಿ ಕಟ್ಟಿಸಿದ 108 ಸ್ತೂಪಗಳಿರುವ ದೋಖಲಾ ಪಾಸ್ ಪ್ರಸಿದ್ಧವಾಗಿದೆ. ಕೆಲವೊಮ್ಮೆ ಗುಹೆಗಳಲ್ಲಿ ಪುಟ್ಟಪುಟ್ಟ ಸ್ತೂಪಗಳನ್ನು ಒಯ್ದು ಇಡುವರು. ಸ್ತೂಪಗಳಿಗೆ ಉದ್ದಕ್ಕೂ ದೀಡನಮಸ್ಕಾರ ಹಾಕಿಕೊಂಡು ಮಹಿಳೆಯರು ಹೋಗುವರು. ಪ್ರತಿ ಮನೆಯಲ್ಲಿ ವಿಹಾರಾಕಾರದ ಪುಟ್ಟ ಮಂಟಪ. ಅದರಲ್ಲಿ ಬುದ್ಧನ ಚಿತ್ರಪಟ. ಅದರ ಮುಂದೆ ಪಂಚಶೀಲದ ಸಂಕೇತವಾಗಿ ಐದು ಪಾತ್ರೆಗಳಲ್ಲಿ ತುಂಬಿದ ನೀರು; ಬೆಣ್ಣೆದೀಪ ಹಚ್ಚಿ ಲೋಬಾನ ಹಾಕವರು. ಕೈಮುಗಿದು ಅಡ್ಡಬೀಳುವರು. ನಾವು ಮಾರ್ಗದರ್ಶಿ ಸೋನಂ ಮನೆಯ ಪೂಜೆಯಲ್ಲಿ ಭಾಗಿಯಾದೆವು. ವಿಹಾರಗಳಿಗೆ ಹಬ್ಬಗಳಂದು ಹೋಗುವಷ್ಟು ಬಿಟ್ಟರೆ, ಭೂತಾನಿಗಳು ಧಮ್ಮವನ್ನು ಮೈಮೇಲೆ ಒಜ್ಜೆಯಾಗಿ ಹೇರಿಕೊಂಡು ಬದುಕುತ್ತಿಲ್ಲ ಅನಿಸಿತು.

ಇಲ್ಲಿನ ಮನೆ ಅಂಗಡಿ ವಿಹಾರ ಹೋಟೆಲು ಕಛೇರಿಗಳಲ್ಲಿ ದೊರೆಯ ಪಟಗಳಿವೆ. ಬುದ್ಧ, ದೊರೆ ಮತ್ತು ಲಾಮಾಗಳು ಒಂದೇ ಚೌಕಟ್ಟಿನಲ್ಲಿರುವ ಪಟಗಳಿವು. ದೊರೆಯ ಚಿತ್ರಗಳು ಬುದ್ಧನಿಗೆ ಸಮಾನವಾಗಿ ಪ್ರದರ್ಶಿತಗೊಂಡಿವೆ. ದೊರೆಯ ಪಟಗಳಿಗೆ ಕಾರಣ, ಅಧಿಕೃತ ನಿಯಮವೊ, ಜನರಲ್ಲಿರುವ ಸಹಜ ಗೌರವವೊ ತಿಳಿಯದು. ಇಂಗ್ಲೆಂಡಿನಲ್ಲಿ ದೊರೆಯು ಚರ್ಚಿನ ಅಧಿಪತಿಯಾಗಿರುವಂತೆ, ಇಲ್ಲಿ ಭೂತಾನದ ದೊರೆ ಕೂಡ ಧಮ್ಮರಕ್ಷಕ. ಆತ ದೈವೀಕರಣಗೊಂಡಿರುವ ಪ್ರಭು. ಜೋರ್ಡಾನಿನಲ್ಲೂ ದೊರೆಯ ಪಟಗಳನ್ನು ಸರ್ವತ್ರ ಕಾಣಬಹುದು. ವಿಶೇಷವೆಂದರೆ, ಅಲ್ಲಿ ದೊರೆ ತನ್ನ ರಾಣಿಯ ಜತೆ ಕುಳಿತಿರುವನು.

ಮೈತ್ರಿ ಕರುಣೆಗಳನ್ನು ತತ್ವವಾಗಿಯುಳ್ಳ ಬುದ್ಧನ ಶಾಂತ ಮಂದಸ್ಮಿತದ ಪ್ರತಿಮೆಗಳನ್ನೇ ಕಂಡ ನನಗೆ ನೇಪಾಳ-ಟಿಬೆಟ್ಟುಗಳ ಮಹಾಯಾನೀ ಸಂತರ ಭೀಷಣಮುಖಗಳು ಕಂಗೆಡಿಸುತ್ತಿದ್ದವು. ಭೂತಾನಿಗಳ ಪ್ರಕಾರ, ಬುದ್ಧ ಮತ್ತು ಬೋಧಿಸತ್ವರು ಕೇಡಿನ ಶಕ್ತಿಗಳ ವಿರುದ್ಧ ಹೋರಾಡುತ್ತ ಈ ರೂಪಧಾರಣೆ ಮಾಡಿದರಂತೆ; ಅವರು ಸ್ಥಳೀಯ ದೈವಗಳ ಕೇಡಿನಿಂದ ಜನರನ್ನು ರಕ್ಷಿಸಲು ಅವತರಿಸಿದವರು ಎಂಬ ಗ್ರಹಿಕೆಯೂ ಇದೆ. ಹೊರಗಿನಿಂದ ಹೋದ ಧಮ್ಮವು ಗುಡ್ಡಗಾಡಿನ ಬುಡಕಟ್ಟು ಧರ್ಮಗಳನ್ನು ಅಳಿಸಿ ನೆಲೆಗೊಳ್ಳುವಾಗ ಮಾಡಿದ ಹೋರಾಟದ ಭಾಗವಾಗಿ ಈ ಭೀಷಣ ಚಹರೆ ಬಂದಂತಿದೆ. ಪ್ರಶ್ನೆಯೆಂದರೆ, ಹೊರಗಿನಿಂದ ಬಂದ ಧಮ್ಮವು ಸ್ಥಳೀಯ ಬುಡಕಟ್ಟು ಸಂಸ್ಕೃತಿಯಿದ ಬೌದ್ಧವು ಏನನ್ನೂ ಪಡೆದುಕೊಳ್ಳಲಿಲ್ಲವೇ? ಇದಕ್ಕೆ ಉತ್ತರವನ್ನು ನಾವು ಭೇಟಿ ಮಾಡಿದ ಲಬೋಸಾ ಹಳ್ಳಿ ಉತ್ತರ ಕೊಟ್ಟಿತು. ಹೊರಗಿನಿಂದ ಬಂದ ಧಮ್ಮಗಳು ಎಷ್ಟೇ ಪ್ರಭಾವಶಾಲಿಯಿರಲಿ, ಸ್ಥಳೀಯವಾದ ಎಲ್ಲವನ್ನೂ ಅಳಿಸಿಹಾಕಲಾಗದು. ತಾನು ಬೇರುಬಿಡಲು ಅವುಗಳಲ್ಲಿ ಕೆಲವನ್ನು ಉಳಿಸಿಕೊಂಡು ಅಳವಡಿಸಿಕೊಳ್ಳುವ ಅನಿವಾರ್ಯತೆ ಉಂಟಾಗುವುದು.

ನಾವು ಲಬೋಸಾಕ್ಕೆ ಹೋಗಿದ್ದು ಆಕಸ್ಮಿಕವಾಗಿ. ಯಾವುದಾದರೂ ಒಂದು ಹಳ್ಳಿಯಲ್ಲಿ ಕನಿಷ್ಠ ಸೌಲಭ್ಯದಲ್ಲೇ ಕಳೆಯುವ ಇರಾದೆ ನಮಗಿತ್ತು. ಟ್ಯಾಕ್ಸಿಚಾಲಕನು ನಮಗೆ ಸುಪ್ರಸಿದ್ಧ ಮತ್ತು ಪ್ರಾಚೀನ ಬೌದ್ಧವಿಹಾರವಿರುವ ಲಬೋಸಾಕ್ಕೆ ಕರೆದೊಯ್ದನು. ಕಾರು ಪರ್ವತದ ಸೊಂಟಕ್ಕೆ ಸುತ್ತಿದ ಬೆಲ್ಟಿನಂತಹ ಟಾರಿನ ಹೆದ್ದಾರಿಯನ್ನು ಬಿಟ್ಟು ಕಣಿವೆಯಲ್ಲಿರುವ ಮಣ್ಣಿನ ಕಚ್ಚಾರಸ್ತೆಗೆ ಇಳಿಯುತ್ತಿದ್ದಂತೆ ಖುಶಿಯಾಯಿತು.

ಲಬೊಸಾ ಮುಟ್ಟುವಾಗ ಸಂಜೆಯಾಗುತ್ತಿತ್ತು. ಅದೊಂದು ಬೆಟ್ಟಗಳ ಬುಡದಲ್ಲಿರುವ ಸಣ್ಣಹಳ್ಳಿ. ದೂರದ ಹಿಮಪರ್ವತದಲ್ಲಿ ಹುಟ್ಟಿದ ಹೊಳೆಯೊಂದು ಊರಬದಿ ಹರಿಯುತ್ತಿತ್ತು. ಊರನ್ನು ಸುತ್ತುವರೆದಂತೆ ಕಿರು ಬೆಟ್ಟಗಳು ಆವರಿಸಿ ಕೋಟೆ ಕೊಟ್ಟಿದ್ದವು. ನಡುವಣ ಮಟ್ಟಸವಾದ ವಿಶಾಲ ಕಣಿವೆಯಲ್ಲಿ ನೆಲ್ಲುಗದ್ದೆ. ಕಟಾವು ಮುಗಿದು ಕೂಳೆಬಿಟ್ಟ ಗದ್ದೆಗಳಲ್ಲಿ ಒಟ್ಟಿದ ಬಣವೆಗಳು, ಗದ್ದೆಗಳು ತಳೆದ ಘನಸ್ತನಗಳಂತೆ ಕಾಣುತ್ತಿದ್ದವು. ಕೆಲವು ಗದ್ದೆಯಲ್ಲಿ ತರಕಾರಿ ಬೆಳೆಯಲಾಗಿತ್ತು. ಒಂದು ಗುಂಡಿಯಲ್ಲಿ ಬಡಗಿಗಳು ಗರಗಸದಿಂದ ಮರ ಕೊಯ್ಯುತ್ತಿದ್ದರು. ತೊಲೆಗಳ ರಾಶಿ ಬಿದ್ದಿತ್ತು. ಹಿತ್ತಲುಗಳಲ್ಲಿ ಕೇಳುವವರು ದಿಕ್ಕಿಲ್ಲದೆ ಹಸಿರ ಲೈಟುಗಳಂತೆ ಸೀಮೆ ಬದನೆಕಾಯಿ ಇಳಿಬಿದ್ದಿದ್ದವು. ಸೀಬೆಮರಗಳು ಹಣ್ಣನ್ನು ನೆಲಕ್ಕೆ ಹಾಸಿದ್ದವು. ಸ್ಥಳೀಯ ಹಳದಿ ಹಣ್ಣಿನ ಗಿಡಗಳು ಎಲ್ಲ ಮನೆಗಳಲ್ಲೂ ಇದ್ದವು. ಊರು ಸುಭಿಕ್ಷವಾಗಿತ್ತು. ಸುಭಿಕ್ಷ ಶಬ್ದವು ಹುಟ್ಟಿದ್ದೇ ಭಿಕ್ಷುಗಳಿಗೆ ಸಮೃದ್ಧವಾಗಿ ಆಹಾರ ಸಿಗುವ ಹಿನ್ನೆಲೆಯಲ್ಲಿ. ಲಬೋಸಾದ ಪರಿಸರ ಸಮ್ಮೋಹಕ ವಾಗಿತ್ತು.

ಒಂದು ಸಣ್ಣ ಹೋಟೆಲಿನಲ್ಲಿ ವಸ್ತಿ ಮಾಡಿದೆವು. ಊರಿನ ಒಬ್ಬ ಹುಡುಗಿ ನಗರದಲ್ಲಿದ್ದ ನೌಕರಿ ಬಿಟ್ಟು, ಪೂರ್ವಜರ ಮನೆಯನ್ನೇ ಪ್ರವಾಸಿಗರಿಗೆ ಬೇಕಾದ ಅನುಕೂಲ ಕಲ್ಪಿಸಿ, ಹೋಂಸ್ಟೇ ನಡೆಸುತ್ತಿದ್ದಳು. ನಾವು ಟ್ಯಾಕ್ಸಿಯಿಂದ ಇಳಿದವರು, ರೂಮುಗಳಿಗೆ ಹೋಗದೆ ಕತ್ತಲಾಗುವ ಮುನ್ನವೇ ಹಳ್ಳಿ ನೋಡಲು ಹೊರಟೆವು. ಮೇಯಲು ಹೋಗಿದ್ದ ದನಗಳು ಧೂಳೆಬ್ಬಿಸುತ್ತ ಊರೊಳಗೆ ಬರುತ್ತಿದ್ದವು. ಹಳೆಯ ಕೋಟೆಯಂತೆ ಕಾಣುವ ಪಾಳುಬಿದ್ದ ಮನೆಯ ಗೋಡೆಗಳು. ಅಲ್ಲಲ್ಲಿ ಮಲಗಿದ್ದ ನಾಯಿಗಳು. ಅಂಗಡಿಗಳ ಕಟ್ಟೆಯ ಮೇಲೆ ಕೂತ ಹಣ್ಣು ವೃದ್ಧರು. ಊರಿಗೆ ಯಾರೊ ಹೊಸ ಬರೆಂದು ಹೊರಬಂದು ಇಣುಕುವ ಮಹಿಳೆಯರು.

ವಿಶೇಷವೆಂದರೆ, ಲಬೋಸಾದ ಪ್ರತಿ ಮನೆಯ ಗೋಡೆಯ ಮೇಲೆ ಉದ್ರಿಕ್ತ ಶಿಶ್ನದ ಚಿತ್ರಗಳಿದ್ದವು. ಕೆಲವಕ್ಕೆ ಮನುಷ್ಯ ಮುಖವೂ



ಇದ್ದು ಅವು ಹಲ್ಲುಬಿಟ್ಟು ನಗುತ್ತಿದ್ದವು. ನಾವು ಭೂತಾನದ ಎರಡು ದೊಡ್ಡ ನಗರಗಳಾದ ಥಿಂಪು ಮತ್ತು ಪಾರೊವಿನ ಅಂಗಡಿಗಳಲ್ಲಿ ಕಟ್ಟಿಗೆಯ ಪುಟ್ಟಪುಟ್ಟ ಶಿಶ್ನಗಳನ್ನು ನೇತುಹಾಕಿದ್ದು ಕಂಡಿದ್ದೆವು. ಟ್ಯಾಕ್ಸಿಯಲ್ಲಿ ನೇತುಹಾಕಿದ್ದ ತಾಯಿತದಂತಹ ವಸ್ತುಗಳಲ್ಲಿ ಮರದ ಪುಟ್ಟಶಿಶ್ನವೂ ಇತ್ತು. ಅನೇಕರು ಕೊರಳೊಳಗೂ ಧರಿಸಿದ್ದರು. ಅದು ಕೆಲವರ ಕೀಚೈನಲ್ಲಿತ್ತು. ಇವುಗಳ ಮೂಲ ಲಬೊಸಾ ಎಂದು ಗೊತ್ತಿರಲಿಲ್ಲ. ಊರಲ್ಲಿದ್ದ ಕರಕುಶಲ ವಸ್ತುಗಳನ್ನು ಮಾರುವ ಅಂಗಡಿಗೆ ಹೋದೆವು. ಅದರ ತುಂಬ ವಿವಿಧ ಆಕಾರ ಮತ್ತು ಬಣ್ಣದ ಶಿಶ್ನಗಳು. ಅಂಗಡಿಯ ಹುಡುಗ ನಮ್ಮ ವಿಸ್ಮಯಚಕಿತ ಮುಖವನ್ನು ಕಂಡು 'ಸರ್ ಪ್ಲೀಸ್ ಕಮ್‌ಇನ್, ಹ್ಯಾವ್ ಎ ಲುಕ್' ಎಂದು ಆಹ್ವಾನಿಸಿದನು. ಇಲ್ಲಿನ ಜನರಿಗೆ ಈ ಚಿತ್ರ ಮತ್ತು ಕಾಷ್ಠಶಿಲ್ಪಗಳ ಬಗ್ಗೆ ಯಾವುದೇ ಮುಜುಗರವಿರಲಿಲ್ಲ. ಬದಲಿಗೆ ನಮ್ಮ ಸೋಜಿಗದ ಮಜಾ ತೆಗೆದುಕೊಳ್ಳುತ್ತಿದ್ದರು. ಹೋಟೆಲು ಮತ್ತು ಮನೆಗಳಲ್ಲಿ ಯುರೋಪಿಯನರೊ ಅಮೆರಿಕನರೊ ಬಿಡಾರ ಹೂಡಿದ್ದರು. ಲಬೋಸಾ ಅಂತಾರಾಷ್ಟ್ರೀಯ ಪ್ರವಾಸಿ ಕೇಂದ್ರವಾಗಿತ್ತು. ನಿಗೂಢವಾದುದನ್ನು ಪವಿತ್ರವಾದುದನ್ನು ಪ್ರೇಕ್ಷಣೀಯ ಮಾಡುವುದು ಟೂರಿಸಂನ ಗುಣ. ಅದರ ಪಾವಿತ್ರ್ಯ ಅಳಿಸಿ ಮಾರುಕಟ್ಟೆಯ ಸರಕಾಗಿಸುವ ತನಕ ಅದಕ್ಕೆ ವಿರಾಮವಿಲ್ಲ.

ಊರ ಹೊರಗೆ ನದೀತಟದಲ್ಲಿ ಸಣ್ಣ ಬೆಟ್ಟವಿತ್ತು. ಸುತ್ತಮುತ್ತ ಆವರಿಸಿದ ಬೃಹದಾಕಾರದ ಪರ್ವತಗಳ ನಡುವಿನ ಬಯಲಿನಲ್ಲಿ ಅದು ನೆಲಕ್ಕೆ ನೆಟ್ಟ ಬುಗುರಿಯಂತಿತ್ತು. ಅದರ ಮೇಲೆ 16ನೇ ಶತಮಾನದಲ್ಲಿದ್ದ ಕುನ್ಲೆ ಎಂಬ ಸಂತನ ಪ್ರಾಚೀನ ವಿಹಾರ. ನಾವು ವಿಹಾರವಿರುವ ಬೆಟ್ಟವನ್ನೇರುವಾಗ ಸೂರ್ಯ ಅಸ್ತಮಿಸುತ್ತಿದ್ದನು. ಕೆಳಗಿನ ಕಣಿವೆಯಲ್ಲಿ ಭತ್ತದ ನಸುಹಳದಿ ಗದ್ದೆಗಳು ಹೊನ್ನಿಗೆ ತಿರುಗುತ್ತಿದ್ದವು. ವಿಹಾರದಿಂದ ಮರಳಿ ಬರುತ್ತಿದ್ದ ಕೆಲವು ಬಿಳಿಯರು ನಮಗೆ ಎದುರಾದರು. 'ಈಗ ವಿಹಾರ ಮುಚ್ಚುವ ಸಮಯ. ಅಲ್ಲಿ ಭೀಕರ ನಾಯಿಗಳಿವೆ. ಕತ್ತಲಾದ ಮೇಲೆ ಅಲ್ಲಿಗೆ ಹೋಗುವುದು ಕ್ಷೇಮಕರವಲ್ಲ' ಎಂದು ಅವರು ಎಚ್ಚರಿಸಿದರು.

ಭೂತಾನದಲ್ಲಿ ಎಲ್ಲೆಡೆ ಕಾಣುವ ಪ್ರಾಣಿ ನಾಯಿ. ನಮ್ಮ ಚಾಲಕ/ಮಾರ್ಗದರ್ಶಿ ಸೋನಂ ಪ್ರಕಾರ, ಭೂತಾನದಲ್ಲಿ ಅಂಜಬೇಕಾದ್ದು ಕಳ್ಳರಿಗಲ್ಲ. ಚಳಿಗೆ ಮತ್ತು ನಾಯಿಗಳಿಗೆ. ವಿಹಾರಗಳಲ್ಲಿ ನಾಯಿಗಳು ಹಿಂಡುಹಿಂಡಾಗಿದ್ದವು. ಉಪಾಸಕರು ವಿಹಾರಕ್ಕೆ ತರುವ ಆಹಾರ ತಿಂದು ಹುಲಿಗಳಾಗಿದ್ದವು. ನಾವು ನಾಯಿಗಳಿಗಂಜಿ ಮರಳಿ ಬರುತ್ತಿರುವಾಗ, ವಿಹಾರಕ್ಕೆ ಹೋಗುತ್ತಿರುವ ತರುಣ ಗಂಡುಹೆಣ್ಣಿನ ಜೋಡಿಗಳು ಎದುರಾದವು. ಅವರ ಕಂಕುಳಲ್ಲಿ ಚಾಪೆದಿಂಬು ಇದ್ದವು. ಇಲ್ಲಿನ ನಂಬಿಕೆಯ ಪ್ರಕಾರ, ವಿಹಾರದಲ್ಲಿ ರಾತ್ರಿ ವಸ್ತಿಯಿದ್ದು ಭೋಗಮಾಡಿದರೆ,ನಿಸ್ಸಂತಾನಿಗಳಿಗೆಸಂತಾನಪ್ರಾಪ್ತವಾಗುವುದಂತೆ.

ಮುಂದುವರೆಯುವುದು....



**ಕವಿ ಮನಸು**

## ಅಜ್ಜ ಕಲಿಸಿದ ಪಾಠ



ಅಯ್ಯೋ! ಕಳೆಯಿತು ಬೇಸಿಗೆ ರಜಾ
ಇನ್ನು ಮಳೆಯಲ್ಲಿ ನೆನೆಯುವುದೇ ಮಜಾ.
ಶಾಲೆಗೆ ತಯಾರಾಗಿ ಹೊರಡುವ ಮುನ್ನ
ಸಸಿ ನೆಟ್ಟು, ನೀರು ಎರೆಯೋಣ ಚಿನ್ನ.

ಬಂತು ವೈಶಾಖ – ಜ್ಯೇಷ್ಠ
ಬೀಜಗಳ ಬಿತ್ತನೆಗೆ ಶ್ರೇಷ್ಠ.
ಬಿತ್ತಿದ ಬೀಜ ಚಿಗುರು ಹೊಡೆಯುವ ಪರಿ
ಪುಸ್ತಕದಲ್ಲಿ ಹೇಳಿದಷ್ಟು ಸುಲಭವಲ್ಲ ತಿಳಿ.

ಮರ ಗಿಡ ಕೊಡುವುದು ಹೂವು, ಹಣ್ಣು
ಜೊತೆಗೆ ಮುಂದಿನ ಪೀಳಿಗೆಗೆ ಫಲವತ್ತತೆಯ
ಮಣ್ಣು.
ಅಜ್ಜ ಕಲಿಸಿದ ಪಾಠ ಮರೆಯಬೇಡ
ಬೆಳೆದು ನಿಂತ ಮರಗಳನ್ನು ಕಡೆಯಲು
ಬಿಡಬೇಡ.

ನಾ ಇಲ್ಲದಿದ್ದರೂ ನಿನ್ನೊಂದಿಗೆ ಇರುವುದು
ನಾ ನೆಟ್ಟು ಸಲುಹಿದ ಗಿಡ ಮರ ನಿನ್ನ
ನೆರಳಾಗಿ.
ಅವುಗಳು ಸಹ ನಿನ್ನೊಂದಿಗೆ ಬೆಳೆಯುವುದು
ಒಡಹುಟ್ಟಿದವರಂತೆ ತಂಪನ್ನು ನೀಡುವುದು
ನಿನಗಾಗಿ.

– ಮಂಜುಶ್ರೀ ಮುರಳೀಧರ್

## ಚಿತ್ರ ಬರೆಯಿತು ಮುಂಗಾರು



ತುಂತುರು ಮಳೆಹನಿ ಬಂತದು ಭೂಮಿಗೆ
ಚಿಂತೆಯ ಕಳೆಯಿತು ಜೀವಿಗಳ
ಸಂತಸವೆಲ್ಲೆಡೆ ತಂತದು ಹಂಚಲು
ಹಂತಕ ಬರವನು ನೀಗಿಸುತ

ಬತ್ತಿದ ಕೆರೆಗಳು ಮತ್ತದು ತುಂಬಿತು
ಕುತ್ತಿನ ಬರವನು ಹೊರದೂಡಿ
ಭತ್ತವ ಹೊಲದಲಿ ಬಿತ್ತಿದ ರೈತನು
ತುತ್ತನು ನೀಡುವ ಬೆಳೆಗಾಗಿ

ಉಸಿರನು ನೀಡುವ ಹಸಿರಿನ ಮೊಳಕೆಯು
ಹೊಸೆಯಿತು ನೆಲದಲಿ ಚಿತ್ತಾರ
ಬಸಿರಿನ ಒಡಲಲಿ ನಸುನಗೆ ಬೀರುವ
ವಸುಧೆಗೆ ಮಾಡಿದೆ ಶೃಂಗಾರ

ಮುತ್ತಿನ ಹನಿಗಳ ಹೊತ್ತಿಹ ಮೇಘವು
ಹತ್ತಿರವಾಯಿತು ಮಳೆ ಸುರಿದು
ಸುತ್ತಲ ಪರಿಸರ ಚಿತ್ತವ ಸೆಳೆವುದು
ಚಿತ್ರವ ಬರೆಯಿತು ಮುಂಗಾರು॥

– ಪೆರ್ಮುಖ ಸುಬ್ರಹ್ಮಣ್ಯ ಭಟ್




# ಪರಿಸರ ಸಂರಕ್ಷಣೆ ನಮ್ಮೆಲ್ಲರ ಕರ್ತವ್ಯ

## ಡಿಹೆಚ್ಓ ಡಾ.ವೈ.ರಮೇಶ್‌ಬಾಬು ಹೇಳಿಕೆ | ವಿಶ್ವ ಪರಿಸರ ದಿನಾಚರಣೆ | ಸಸಿ ನೆಡುವ ಕಾರ್ಯಕ್ರಮ

■ **ಹಂಪಿ ಟೈಮ್ಸ್ ಬಳ್ಳಾರಿ**

ಬರ ಪರಿಸ್ಥಿತಿ ತಡೆಗಟ್ಟಲು ಹಾಗೂ ಭೂಮಿಯನ್ನು ಸಹಜ ಸ್ಥಿತಿಗೆ ಮರು ಸ್ಥಾಪಿಸಲು ಪ್ರತಿಯೊಬ್ಬರು ಗಿಡಗಳನ್ನು ನೆಟ್ಟು ಪೋಷಿಸಬೇಕು. ಪರಿಸರ ರಕ್ಷಣೆಯು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ವೈ. ರಮೇಶ್ ಬಾಬು ಅವರು ತಿಳಿಸಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಹವಮಾನ ವೈಪರಿತ್ಯ, ಮಾನವ ಆರೋಗ್ಯ ಕಾರ್ಯಕ್ರಮ ಮತ್ತು ಡಿವಿಬಿಡಿಸಿಪಿ ವತಿಯಿಂದ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ "ಭೂಮಿ ಮರು ಸ್ಥಾಪನೆ, ಮರುಭೂಮೀಕರಣ ಹಾಗು ಬರ ಸ್ಥಿತಿ ಸ್ಥಾಪಕತ್ವ" ಎಂಬ ಧ್ಯೇಯವಾಕ್ಯದೊಂದಿಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಕಚೇರಿ ಆವರಣದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಸಸಿ ನೆಡುವ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಪ್ಲಾಸ್ಟಿಕ್ ಮುಕ್ತ ಪರಿಸರವನ್ನು ನಿರ್ಮಾಣ ಮಾಡುವಲ್ಲಿ ಎಲ್ಲಾರು ಪ್ಲಾಸ್ಟಿಕ್ ಬಳಕೆಯನ್ನು ಕಡಿತಗೊಳಿಸಬೇಕು ಹಾಗೂ ತಮ್ಮ ಮನೆ ಆವರಣದಲ್ಲಿ ಗಿಡಗಳನ್ನು ನೆಡಬೇಕು ಎಂದರು.

ಪ್ಲಾಸ್ಟಿಕ್ ಬಳಕೆಯನ್ನು ನಿಯಂತ್ರಿಸಿದ್ದಲ್ಲಿ ಮುಂದಿನ ಪೀಳಿಗೆಗೆ ಒಳ್ಳೆಯ ಜೀವನವನ್ನು ನೀಡಲು ಸಹಾಯಕವಾಗುತ್ತದೆ. ಎಲ್ಲಾ ಆರೋಗ್ಯ ಸಂಸ್ಥೆಗಳಲ್ಲಿ ಸಾರ್ವಜನಿಕ ಆರೋಗ್ಯ ಹಾಗೂ ಪರಿಸರ ಆರೋಗ್ಯ ಹಿತದೃಷ್ಟಿಯಿಂದ ಆರೋಗ್ಯ ಸಂಸ್ಥೆಗಳ ಆವರಣದ ಸುತ್ತ-ಮುತ್ತ ಸ್ವಚ್ಛತಾ ಕಾರ್ಯ, ಸ್ವಚ್ಛತಾ ಅಭಿಯಾನವನ್ನು ಹಮ್ಮಿಕೊಳ್ಳಬೇಕು. ಸಂಸ್ಥೆಗಳ ಮೇಲ್ಛಾವಣಿ ಸ್ವಚ್ಛಗೊಳಿಬೇಕು ಎಂದರು.

ಎನ್‌ಪಿಸಿಸಿಹೆಚ್‌ಹೆಚ್‌ನ ಜಿಲ್ಲಾ ನೋಡಲ್ ಅಧಿಕಾರಿ ಡಾ.ಆರ್.ಅಬ್ದುಲ್ಲಾ ಅವರು ಮಾತನಾಡಿ, ಆರೋಗ್ಯ ಇಲಾಖೆಯ ವ್ಯಾಪ್ತಿಯ ಜಿಲ್ಲಾ ಆಸ್ಪತ್ರೆ, ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಗಳು, ಸಮುದಾಯ ಆರೋಗ್ಯ ಕೇಂದ್ರಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಉಪಕೇಂದ್ರಗಳು ಹಾಗೂ ಆಯುಷ್‌ಮಾನ್ ಆರೋಗ್ಯ ಮಂದಿರಗಳ ಆವರಣದಲ್ಲಿ ಉತ್ತಮ ಗಾಳಿಯನ್ನು ನೀಡುವಂತಹ ಹಾಗೂ ಔಷಧೀಯ ಸಸ್ಯ, ಮರಗಳನ್ನು ಬೆಳಸಿ ನಿರ್ವಹಿಸುವ ಚಟುವಟಿಕೆಯನ್ನು ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿದೆ ಎಂದು ತಿಳಿಸಿದರು.

ಇದರಿಂದ ಭೂಮಿಯ ಹಸಿರು ಹೊದಿಕೆಯು ಏರಿಕೆಯಾಗುವುದಲ್ಲದೆ, ಶುದ್ಧಗಾಳಿ ಹಾಗೂ ತಂಪಾದ ವಾತಾವರಣ ಲಭ್ಯವಾಗುತ್ತದೆ. ಗಿಡ, ಮರಗಳ ಬೇರುಗಳು ಮಣ್ಣನ್ನು ಹಿಡಿದಿಟ್ಟುಕೊಳ್ಳುವುದರಿಂದ ಮಣ್ಣಿನ ಸವಕಳಿಯನ್ನು ತಡೆಗಟ್ಟಬಹುದು ಹಾಗೂ ಇದರಿಂದ ಅಂತರ್‌ಜಲದ ಮಟ್ಟವು ಉತ್ತಮಗೊಳ್ಳುತ್ತದೆ ಎಂದು ಅಭಿಪ್ರಾಯ ಪಟ್ಟರು.

ಈ ಸಂದರ್ಭದಲ್ಲಿ ಜಿಲ್ಲಾ ಕೀಟಶಾಸ್ತ್ರಜ್ಞರಾದ ನಂದಾಕಡಿ, ಜಿಲ್ಲಾ ವಿಬಿಡಿಸಿ ಸಮಾಲೋಚಕರಾದ ಪ್ರತಾಪ್.ಹೆಚ್., ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ದಾಸಪ್ಪನವರ ಸೇರಿದಂತೆ ಜಿಲ್ಲಾ ವಿಬಿಡಿಸಿ ಅಧಿಕಾರಿಗಳ ಕಚೇರಿ, ತಾಲ್ಲೂಕು ಆರೋಗ್ಯಾಧಿಕಾರಿಗಳ ಕಚೇರಿ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿಯ ಅಧಿಕಾರಿಗಳು, ಸಿಬ್ಬಂದಿಗಳು ಮತ್ತು ಇತರೆ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳ ಸಿಬ್ಬಂದಿಗಳು ಹಾಜರಿದ್ದರು.





■ **ಹಂಪಿ ಟೈಮ್ಸ್ ಬಳ್ಳಾರಿ**

ಪ್ರತಿಯೊಬ್ಬರು ಗಿಡಗಳನ್ನು ನೆಡುವ ಮೂಲಕ ಪರಿಸರ ಸಂರಕ್ಷಣೆಗೆ ನಾವೆಲ್ಲರೂ ಪಣತೊಡೋಣ ಎಂದು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಕರೆ ನೀಡಿದರು. ಜಿಲ್ಲಾಡಳಿತ, ಬಳ್ಳಾರಿ ಪ್ರಾದೇಶಿಕ ಅರಣ್ಯ ವಿಭಾಗ, ಜಿಲ್ಲಾ ಪಂಚಾಯತ್ ಮತ್ತು ಮಹಾನಗರ ಪಾಲಿಕೆ ಸಂಯುಕ್ತಾಶ್ರಯದಲ್ಲಿ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಬುಧವಾರ ನಗರದ ಕೋಟೆ ಪ್ರದೇಶದ ಕ್ರಿಕೆಟ್ ಕ್ಲಬ್ ಆವರಣದಲ್ಲಿ ಗಿಡ ನೆಟ್ಟು ನೀರುಣಿಸಿ ಬಳಿಕ ಅವರು ಮಾತನಾಡಿದರು. ಈ ಸಂದರ್ಭದಲ್ಲಿ ಬಳ್ಳಾರಿ ವಲಯ ಪೊಲೀಸ್ ಮಹಾನಿರೀಕ್ಷಕ ಬಿ.ಎಸ್.ಲೋಕೇಶ್ ಕುಮಾರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಂಜೀತ್ ಕುಮಾರ್ ಬಂಡಾರು, ಬಳ್ಳಾರಿ ಪ್ರಾದೇಶಿಕ ಉಪ ಅರಣ್ಯ ಸಂರಕ್ಷಣಾಧಿಕಾರಿ ಸಂದೀಪ್ ಸೂರ್ಯವಂಶಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ, ಮಹಾನಗರ ಪಾಲಿಕೆ ಆಯುಕ್ತ ಜಿ.ಖಲೀಲ್ ಸಾಬ್ ಸೇರಿದಂತೆ ವಿವಿಧ ಸಂಘ-ಸಂಸ್ಥೆಗಳ ಪದಾಧಿಕಾರಿಗಳು ಹಾಗೂ ಅರಣ್ಯ ಇಲಾಖೆಯ ಅಧಿಕಾರಿ ಹಾಗೂ ಸಿಬ್ಬಂದಿಗಳು ಮತ್ತು ವಿದ್ಯಾರ್ಥಿಗಳು ಇದ್ದರು.

# ಹಿಂದುಳಿದ ವರ್ಗಗಳ ಕಾನೂನು ಪದವೀಧರರ ತರಬೇತಿ ಅರ್ಜಿ ಆಹ್ವಾನ

■ **ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ 2024-25ನೇ ಸಾಲಿಗೆ ಕಾನೂನು ಪದವೀಧರರ ತರಬೇತಿಗಾಗಿ ಅರ್ಹ ಹಿಂದುಳಿದ ವರ್ಗಗಳಿಗೆ ಸೇರಿದ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಜಲಾಲಪ್ಪ ಅವರು ತಿಳಿಸಿದ್ದಾರೆ.

ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಕೊನೆಯ ದಿನ ಜುಲೈ 05 ಆಗಿರುತ್ತದೆ.

ನಿಬಂಧನೆಗಳು:ಅಭ್ಯರ್ಥಿಯುಬಳ್ಳಾರಿಜಿಲ್ಲೆಯವರಾಗಿರಬೇಕು. ಅಭ್ಯರ್ಥಿಗಳು ಪ್ರವರ್ಗ-1, ಪ್ರವರ್ಗ-2(ಎ), ಪ್ರವರ್ಗ-3(ಎ) ಮತ್ತು ಪ್ರವರ್ಗ-3(ಬಿ)ಗೆ ಸೇರಿದವರಾಗಿರಬೇಕು. ಶೇಕಡವಾರು ಪ್ರವರ್ಗ-1 ರಲ್ಲಿ 2 ಅಭ್ಯರ್ಥಿಗಳನ್ನು ಅಯ್ಕೆ ಮಾಡಿ ಉಳಿದ ವರ್ಗಗಳಲ್ಲಿ ನಿಯಮಾನುಸಾರ 8 ಅಭ್ಯರ್ಥಿಗಳು ಒಟ್ಟು 10 ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು. ಅಭ್ಯರ್ಥಿಯು ಬಾರ್ ಕೌನ್ಸಿಲ್‌ನಲ್ಲಿ ಹೆಸರನ್ನು ನೋಂದಾಯಿಸಿರಬೇಕು.

ತರಬೇತಿಗೆ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕಕ್ಕೆ ಹಿಂದೆ 2 ವರ್ಷಗಳೊಳಗಾಗಿ ಕಾನೂನು ಪದವಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. ಕಾನೂನು ತರಬೇತಿಯು 4 ವರ್ಷಗಳ ಅವಧಿಯಾಗಿದ್ದು, ಮಾಸಿಕ ರೂ.4,000 ಗಳ ತರಬೇತಿ ಭತ್ಯೆ ನೀಡಲಾಗುವುದು. 5 ಅಭ್ಯರ್ಥಿಗಳನ್ನು ಪ್ರವರ್ಗ-2(ಎ) ರಲ್ಲಿ ಅಯ್ಕೆ ಮಾಡಲಾಗುವುದು. ಹಿಂದುಳಿದ ವರ್ಗಗಳ ಪ್ರವರ್ಗ-2ಎ ಅಭ್ಯರ್ಥಿಗಳಿಗೆ 38 ವರ್ಷ ಗರಿಷ್ಠ ವಯೋಮಿತಿ (ಅರ್ಜಿ ಸಲ್ಲಿಸಲು ಇರುವ ಕೊನೆಯ ದಿನಾಂಕಕ್ಕೆ) ಇರುತ್ತದೆ. ತರಬೇತಿಯ ಅವಧಿಯ ಮಧ್ಯಭಾಗದಲ್ಲಿ ಅಭ್ಯರ್ಥಿಯು ತರಬೇತಿಗೆ ಗೈರು ಹಾಜರಾದಲ್ಲಿ ಪಡೆಯಲಾಗಿರುವ ತರಬೇತಿ ಭತ್ಯೆಯ ಹಣವನ್ನು ಬಡ್ಡಿಯೊಂದಿಗೆ ಪಾವತಿಸಬೇಕಾಗುವುದು. ವಾರ್ಷಿಕ ಆದಾಯದ ಮಿತಿ ಪ್ರವರ್ಗ-2ಎ ಗೆ ರೂ.2.50 ಲಕ್ಷ ನಿಗದಿಪಡಿಸಲಾಗಿದೆ.

ಆಯ್ಕೆಯಾದ ಅಭ್ಯರ್ಥಿಗಳನ್ನು ಜಿಲ್ಲಾ ಸಮಿತಿಯು ಜಿಲ್ಲಾ ಪಬ್ಲಿಕ್ ಪ್ರಾಸಿಕ್ಯೂಟರ್, ಸರ್ಕಾರಿ ವಕೀಲರು ಅಥವಾ ಕನಿಷ್ಟ 15 ವರ್ಷಗಳ ವೃತ್ತಿಯಲ್ಲಿ ಅನುಭವ ಹೊಂದಿರುವ ವಕೀಲರ ಅಧೀನದಲ್ಲಿ ತರಬೇತಿ ಪಡೆಯುವುದು. ಅಭ್ಯರ್ಥಿಗಳನ್ನು ಜಿಲ್ಲಾ ಮಟ್ಟದ ಆಯ್ಕೆ ಸಮಿತಿಯಿಂದ ಸಂದರ್ಶನದ ಮೂಲಕ ಆಯ್ಕೆ ಮಾಡಲಾಗುವುದು. ಅಭ್ಯರ್ಥಿಗಳು ಅರ್ಜಿಯ ಜೊತೆಗೆ ಎಸ್.ಎಸ್.ಎಲ್.ಸಿ ಅಂಕಪಟ್ಟಿ ಅಥವಾ ಶಾಲಾ ವರ್ಗಾವಣೆ ಪ್ರಮಾಣ ಪತ್ರ ಮತ್ತು ಪದವಿ ಹಾಗೂ ಕಾನೂನು ಪದವಿಗಳಲ್ಲಿ ಪಡೆದ ಅಂಕಪಟ್ಟಿ ಪ್ರಮಾಣ ಪತ್ರದ ದೃಢೀಕರಣ ಪ್ರತಿಗಳನ್ನು ಲಗತ್ತಿಸಬೇಕು. ಅಪೂರ್ಣವಾದ ಹಾಗೂ ಕೊನೆಯ ದಿನಾಂಕದ ನಂತರ ಬಂದ ಅರ್ಜಿಯನ್ನು ಯಾವುದೇ ಮುನ್ಸೂಚನೆ ಇಲ್ಲದೇ ತಿರಸ್ಕರಿಸಲಾಗುವುದು.

ಹೆಚ್ಚಿನ ವಿವರಗಳಿಗಾಗಿ www.ballari.nic.in ವೆಬ್‌ಸೈಟ್ ಜಾಲತಾಣಕ್ಕೆ ಭೇಟಿ ನೀಡಿ ಅರ್ಜಿ ನಮೂನೆ ಪಡೆಯಬಹುದು. ಹೆಚ್ಚಿನ ಮಾಹಿತಿಗಾಗಿ ನಗರದ ಜೋಳದರಾಶಿ ದೊಡ್ಡನಗೌಡ ರಂಗಮಂದಿರ ಹತ್ತಿರದ ಡಿ.ದೇವರಾಜ ಅರಸು ಭವನದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳ ಕಚೇರಿ ಅಥವಾ ದೂ.08392-275751 ಗೆ ಸಂಪರ್ಕಿಸಬಹುದು ಎಂದು ತಿಳಿಸಿದ್ದಾರೆ.

# ವಿಮ್ಸ್ ವೈದ್ಯರ ಮೇಲೆ ಹಲ್ಲೆ ಕ್ರಮ ಕೈಗೊಳ್ಳಿ

■ **ಹಂಪಿ ಟೈಮ್ಸ್ ಬಳ್ಳಾರಿ**

ವಿಮ್ಸ್ ಸಂಸ್ಥೆಯ ವೈದ್ಯಕೀಯ ಮಹಾವಿದ್ಯಾಲಯ ಆಸ್ಪತ್ರೆಯಲ್ಲಿನ ತುರ್ತುಚಿಕಿತ್ಸಾ ಘಟಕದಲ್ಲಿ ದಾಖಲಾಗಿದ್ದ ರೋಗಿ ಇತ್ತೀಚೆಗೆ ಮರಣ ಹೊಂದಿದ ಸಂಬಂಧ ರೋಗಿಯ ಸಹಾಯಕರು, ಆಸ್ಪತ್ರೆಯ ಮಹಿಳಾ ಗೃಹ ವೈದ್ಯರ ಮೇಲೆ ಹಲ್ಲೆ ನಡೆಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ, ತಪ್ಪಿತಸ್ಥರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳುವಂತೆ ಅಪರ ಜಿಲ್ಲಾಧಿಕಾರಿಗಳು ಪೊಲೀಸ್ ಇಲಾಖೆಗೆ ಸೂಚನೆ ನೀಡಿದ್ದಾರೆ. ವಿಮ್ಸ್ ನಲ್ಲಿ ಆಸ್ಪತ್ರೆಯ ಮಹಿಳಾ ಗೃಹ ವೈದ್ಯರ ಮೇಲೆ ಇತ್ತೀಚೆಗೆ ನಡೆದ ಹಲ್ಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಜರುಗಿಸಿ, ಮುಂದಿನ ದಿನಗಳಲ್ಲಿ ಇಂತಹ ಪ್ರಕರಣಗಳು ಮರುಕಳಿಸದಂತೆ ಸೂಕ್ತ ಪೊಲೀಸ್ ರಕ್ಷಣೆ ನೀಡುವಂತೆ ವಿಮ್ಸ್ ನ ವೈದ್ಯರುಗಳ ತಂಡ ಅಪರ ಜಿಲ್ಲಾಧಿಕಾರಿಗಳಿಗೆ ಬುಧವಾರದಂದು ಮನವಿ ಸಲ್ಲಿಸಿತು. ಮನವಿ ಸ್ವೀಕರಿಸಿದ ಅಪರ ಜಿಲ್ಲಾಧಿಕಾರಿ ಮಹಮದ್ ಝುಬೇರ್ ಅವರು, ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಪೊಲೀಸ್ ಇಲಾಖೆಗೆ ಸೂಚನೆ ನೀಡಲಾಗುವುದು, ವೈದ್ಯರು ನಿರ್ಭೀತಿಯಿಂದ ತಮ್ಮ ಕರ್ತವ್ಯವನ್ನು ನಿರ್ವಹಿಸುವಂತೆ ತಿಳಿಸಿದರು.

ಈ ರೀತಿಯ ಹಲ್ಲೆ ಪ್ರಕರಣಗಳಿಂದ ವೈದ್ಯರು ತುರ್ತು ರೋಗಿಗಳ ಚಿಕಿತ್ಸೆಗೆ ಹಿಂದೇಟು ಹಾಕುವಂತೆ ಮಾಡುತ್ತದೆ. ಹೀಗಾಗಿ ಯಾರೂ ಕೂಡ ಕಾನೂನನ್ನು ಕೈಗೆತ್ತಿಕೊಳ್ಳುವುದು, ವೈದ್ಯರ ಮೇಲೆ ಹಲ್ಲೆ, ನಿಂದನೆ ಮಾಡುವುದು ಸಮಂಜಸವಲ್ಲ ಎಂದು ಅಪರ ಜಿಲ್ಲಾಧಿಕಾರಿ ಮೊಹಮ್ಮದ್ ಝುಬೇರ್ ತಿಳಿಸಿದ್ದಾರೆ.

# ಜೂನ್ 13 ರಂದು ಪಿಂಚಣಿ ಅದಾಲತ್

■ **ಹಂಪಿ ಟೈಮ್ಸ್ ಬಳ್ಳಾರಿ**

ಕಾರ್ಮಿಕರ ಭವಿಷ್ಯ ನಿಧಿ ಸಂಸ್ಥೆಯ ಬಳ್ಳಾರಿ ಪ್ರಾದೇಶಿಕ ಕಚೇರಿ ವತಿಯಿಂದ ಪಿಂಚಣಿದಾರರ ಕುಂದು ಕೊರತೆ ಆಲಿಸಿ, ಪರಿಹರಿಸಲು ಜೂನ್ 13 ರಂದು ಬೆಳಿಗ್ಗೆ 11 ಗಂಟೆಯಿಂದ ಮಧ್ಯಾಹ್ನ 01 ಗಂಟೆಯವರೆಗೆ ನಗರದ ಪ್ರಾದೇಶಿಕ ಕಚೇರಿಯಲ್ಲಿ ಪಿಂಚಣಿ ಅದಾಲತ್ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ಜಿಲ್ಲಾ ಪ್ರಾದೇಶಿಕ ಕಚೇರಿಯ ಪ್ರಾದೇಶಿಕ ಭವಿಷ್ಯ ನಿಧಿ ಆಯುಕ್ತ ಕೆ.ವೆಂಕಟ ಸುಬ್ಬಯ್ಯ ಅವರು ತಿಳಿಸಿದ್ದಾರೆ.

ಬಳ್ಳಾರಿ, ವಿಜಯನಗರ, ಕೊಪ್ಪಳ, ಚಿತ್ರದುರ್ಗ ಜಿಲ್ಲೆಗಳ ಪಿಂಚಣಿದಾರರು ತಮ್ಮ ಕುಂದುಕೊರತೆಗಳಿದ್ದಲ್ಲಿ ಬಳ್ಳಾರಿ ಪ್ರಾದೇಶಿಕ ಕಚೇರಿಯ ಸಾರ್ವಜನಿಕ ಸಂಪರ್ಕ ಅಧಿಕಾರಿಗೆ ಪತ್ರ ಅಥವಾ ಇ-ಮೇಲ್ ಮೂಲಕ ಪಿ.ಪಿ.ಓ ಸಂಖ್ಯೆ, ವಿಳಾಸ, ದೂರವಾಣಿ, ಮೊಬೈಲ್ ಸಂಖ್ಯೆ ಮತ್ತು ಕುಂದು ಕೊರತೆಯ ಸ್ವರೂಪವ ಹಾಗೂ ಇತ್ಯಾದಿಗಳನ್ನು ಜೂನ್ 10 ರೊಳಗಾಗಿ ತಿಳಿಸಬಹುದು. ಪತ್ರ ಲಕೋಟೆ ಮೇಲೆ ಪಿಂಚಣಿ ಅದಾಲತ್ ಎಂದು ಬರೆಯಬೇಕು.

ಹೆಚ್ಚಿನ ಮಾಹಿತಿಗಾಗಿ ದೂ.08392268943 ಗೆ ಸಂಪರ್ಕಿಸಿ

# ಐಟಿಐ ಪ್ರವೇಶಾತಿಗೆ ಆನ್‌ಲೈನ್ ಅರ್ಜಿ ಆಹ್ವಾನ

■ **ಹಂಪಿ ಟೈಮ್ಸ್ ಬಳ್ಳಾರಿ**

ಪ್ರಸ್ತಕ ಸಾಲಿನ ಸರ್ಕಾರಿ ಹಾಗೂ ಅನುದಾನಿತ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ವಿವಿಧ ವೃತ್ತಿಪರ ಕೋರ್ಸ್‌ಗಳಿಗೆ ಮೆರಿಟ್ ಕಮ್ ರಿಸರ್ವೇಶನ್ ಆಧಾರದ ಮೇಲೆ ಜಿಲ್ಲೆಯಲ್ಲಿ ಬರುವ ಸಂಸ್ಥೆಗಳಲ್ಲಿ ಪ್ರವೇಶಾತಿ ಪಡೆಯಲು ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ ಎಂದು ಬಳ್ಳಾರಿಯ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಪ್ರಾಚಾರ್ಯರು ತಿಳಿಸಿದ್ದಾರೆ.

ಆಸಕ್ತ ವಿದ್ಯಾರ್ಥಿಗಳು ಜೂನ್ 09 ರ ಒಳಗಾಗಿ www.cite.karnataka.gov.in ಭೇಟಿ ನೀಡಿ ಅರ್ಜಿ ಸಲ್ಲಿಸಬಹುದು. ಟಾಟಾ ಉದ್ಯೋಗ ಯೋಜನೆಯಡಿ ಆರಂಭಗೊಂಡಿರುವ ಮೂರು ಮತ್ತು ಹತ್ತು ತಿಂಗಳ ಧೀರ್ಘಾವಧಿಯ ವೃತ್ತಿಪರ ಕೋರ್ಸ್‌ಗಳಿಗೆ ಆನ್‌ಲೈನ್‌ನಲ್ಲಿ ಮೊದಲಆದ್ಯತೆಮೇರೆಗೆಪ್ರವೇಶಾತಿಪಡೆದುಕೊಳ್ಳಲಾಗುವುದು.

ಬೇಕಾದ ದಾಖಲೆಗಳು: ಆಧಾರ್ ಕಾರ್ಡ್, ಎಸ್‌ಎಸ್‌ಎಲ್‌ಸಿ ಅಂಕಪಟ್ಟಿ, ವರ್ಗಾವಣೆ ಪ್ರಮಾಣ ಪತ್ರ, ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಹೈ.ಕ (371ಜೆ) ಪ್ರಮಾಣ ಪತ್ರ, ಗ್ರಾಮೀಣ ಮಾಧ್ಯಮ ಪ್ರಮಾಣ ಪತ್ರ ಸೇರಿ ಇನ್ನಿತರೆ ಪೂರಕ ದಾಖಲಾತಿಗಳೊಂದಿಗೆ ಎಸ್‌ಎಸ್‌ಎಲ್‌ಸಿ ಉತ್ತೀರ್ಣ ಹಾಗೂ ಅನುತ್ತೀರ್ಣಗೊಂಡ ಆಸಕ್ತ ಅಭ್ಯರ್ಥಿಗಳು ನಗರದ ಕಂಟೋನ್‌ಮೆಂಟ್ ಬಳಿಯ ರೆಡಿಯೋ ಪಾರ್ಕ್ ಹತ್ತಿರದ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ನಗರದ ಕಂಟೋನ್‌ಮೆಂಟ್ ಬಳಿಯ ರೇಡಿಯೋ ಪಾರ್ಕ್ ಹತ್ತಿರದ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ದೂ.08392294527, ಮೊ.9902351985, 9448421922 ಅಥವಾ ಹತ್ತಿರದ ಐಟಿಐ ಕಾಲೇಜ್‌ಗೆ ಭೇಟಿ ನೀಡಿ ಮಾಹಿತಿ ಪಡೆಯಬಹುದು ಎಂದು ತಿಳಿಸಿದ್ದಾರೆ.



ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.

## ನಿತ್ಯ ಪಂಚಾಂಗ

ಮಾಸ: ವೈಶಾಖ । ಸಂವತ್ಸರ: ಕ್ರೋಧಿ

**06–06–2024 – ಗುರುವಾರ**

| | |
|---|---|
| ತಿಥಿ | : ಅಮವಾಸ್ಯೆ |
| ಪಕ್ಷ | : ಕೃಷ್ಣ |
| ನಕ್ಷತ್ರ | : ರೋಹಿಣಿ |
| ಯೋಗ | : ಧೃತಿ |
| ಕರಣ | : ಚತುಷ್ಪಾದ |
| ಸೂರ್ಯೋದಯ | : 05:41:47 |
| ಸೂರ್ಯಾಸ್ತ | : 19:09:47 |
| ರಾಹು | : 14:07–15:48 |
| ಯಮಘಂಡ | : 05:42–07:23 |
| ಗುಳಿಕ | : 09:04–10:45 |

## ತುಂಗಭದ್ರಾ ನೀರಿನ ಮಟ್ಟ



**ಬುಧವಾರ : 05–06–2024**

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1577.82 ಅಡಿ |
| ಒಳ ಹರಿವು | 517 ಕ್ಯುಸೆಕ್ |
| ಹೊರ ಹರಿವು | 5 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 3.501 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1581.04 ಅಡಿ |
| ಒಳ ಹರಿವು | 889 ಕ್ಯುಸೆಕ್ |
| ಹೊರ ಹರಿವು | 227 ಕ್ಯುಸೆಕ್ |
| ಸಾಮರ್ಥ್ಯ | 4.997 ಟಿಎಂಸಿ |

## ಕೌನ್ಸಿಲಿಂಗ್ ಪ್ರಕ್ರಿಯೆ ಮುಂದೂಡಿಕೆ

**ಹಂಪಿ ಟೈಮ್ಸ್ ಬಳ್ಳಾರಿ**

ಪ್ರಸ್ತಕ ಸಾಲಿನ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಡಾ.ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಶಾಲೆ ಮತ್ತು ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ 6ನೇ ತರಗತಿ ದಾಖಲಾತಿಗೆ ಈಗಾಗಲೇ ಪ್ರವೇಶ ಪರೀಕ್ಷೆ ನಡೆದಿದ್ದು, ಆಯ್ಕೆಯಾದ ವಿದ್ಯಾರ್ಥಿಗಳಿಗೆ ಜೂನ್ 05 ರಂದು ಕೌನ್ಸಿಲಿಂಗ್ ಪ್ರಕ್ರಿಯೆ ನಿಗದಿಯಾಗಿತ್ತು, ಕಾರಣಾಂತರಗಳಿಂದ ಕೌನ್ಸಿಲಿಂಗ್ ಪ್ರಕ್ರಿಯೆಯನ್ನು ಮುಂದೂಡಲಾಗಿದೆ ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ವಿಠೋಬಾ ಹೊನಕಾಂಡೆ ಅವರು ತಿಳಿಸಿದ್ದಾರೆ.

ಹೆಚ್ಚಿನ ಮಾಹಿತಿಗಾಗಿ ಕೊಳಗಲ್ಲು ಡಾ.ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಶಾಲೆ(ಸಿ.ಬಿ.ಎಸ್.ಇ) ಯ ಪ್ರಾಂಶುಪಾಲರ ಮೊ.7353346069, ಸಂಡೂರಿನ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಪ್ರಾಂಶುಪಾಲರ ಮೊ.9480933730, ಕಂಪ್ಲಿಯ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಪ್ರಾಂಶುಪಾಲರ ಮೊ.9113280239 ಗೆ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**INTHE COURT OF THE CIVIL JUDGE & J.M.F.C. AT KUDLIGI**
**Crl. Misc. No.238/2024**
**Between:**
**A.M Parashuram son of Aluru Marappa,** Aged about 35 Years, Hindu, agriculturist, Residing at Hosahalli village, Kudligi Taluk, Vijayanagara Dist. … Petitioner
And
The Tahasildar Kudligi … Respondent

**SUMMONS TO INTERESTED PERSON U/O V RULE 20(A) R/W SEC 151 OF CPC FILED ON BEHALF OF THE PETITIONER.**

Whereas the above petitioners have instituted above petition to get the death certificate of their deceased grandmother by name Gangamma wife of late Marappa @ Obappa was died on 14/08/2022 at Hosahalli village, Kudligi Taluk, Vijayanagara Dist on the file of the civil Judge & JMFC at Kudligi, the Tahasildar Kudligi is the respondent. The interested persons are hereby summoned to appear in this court in person or by pleader duly instructed and able to answer all material question relating to the above petition on 06/06/2024 at 11 A.M. and interested persons are directed to produce all the documents upon which you intended to rely in support of your defense.

Take notice that in default of your appearance on that day, above mentioned case will be heard and determined ex parte.

Given under my hand and seal of this Hon'ble Court on 28/03/2024

By Order of the court
Chief Ministerial
Officer Civil Judge, (J.D) Court, Kudligi

**Parameshwara.H**
Advocate, Kudligi

# ನಾಳೆಯ ಸುರಕ್ಷಿತ ದಿನಗಳಿಗಾಗಿ ಸಸಿನೆಟ್ಟು ಭೂಮಿಯನ್ನ ಸಂರಕ್ಷಿಸಿ

### ನ್ಯಾ. ಅಬ್ದುಲ್ ರಹೀಮಾನ ಎ ನಂದಗಡಿ ಹೇಳಿಕೆ | ಜನ–ವನ ಒಬ್ಬರಿಗೊಂದು ಮರ



**ಹಂಪಿ ಟೈಮ್ಸ್ ಹೊಸಪೇಟೆ**

ತಾಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ ಹೊಸಪೇಟೆ, ಜಿಲ್ಲಾ ಅರಣ್ಯ ಇಲಾಖೆ, ಜಿಲ್ಲಾ ತೋಟಗಾರಿಕೆ ಇಲಾಖೆ, ಜಿಲ್ಲಾ ಆಯುಷ್ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಜೂನ್ 5 ರಂದು ಹೊಸಪೇಟೆ ನ್ಯಾಯಾಲಯದ ಆವರಣದಲ್ಲಿ "ಜನ–ವನ ಒಬ್ಬರಿಗೊಂದು ಮರ" "ವಿಶ್ವ ಪರಿಸರ ದಿನಾಚರಣೆ" ಕಾರ್ಯಕ್ರಮ ನಡೆಯಿತು.

ಹೊಸಪೇಟೆಯ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಅಬ್ದುಲ್ ರಹೀಮಾನ ಎ ನಂದಗಡಿ ಅವರು ಗಿಡ ನೆಡುವುದರ ಮೂಲಕ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಯಾವುದೇ ದೇಶದ ಅಭಿವೃದ್ಧಿಗೆ ಆ ದೇಶದ ಆರ್ಥಿಕ ಸಂಪನ್ಮೂಲಗಳ ಜೊತೆಗೆ ಪರಿಸರವು ಸಹ ತಳಪಾಯವಾಗಿರುತ್ತದೆ. ಈ ನಿಟ್ಟಿನಲ್ಲಿ ಭವಿಷ್ಯದ ಬಗ್ಗೆ ಯೋಚಿಸಿ ನಾವೆಲ್ಲರು ಪರಿಸರ ಸಂರಕ್ಷಣೆಯಲ್ಲಿ ತೊಡಗಬೇಕು. ಪ್ರಾಣಿ ಮತ್ತು ಪಕ್ಷಿಗಳ ಸಹ ಪರಿಸರದ ಭಾಗವಾಗಿದ್ದು ಹಣ್ಣು ಹಂಪಲದ ಸಸಿ ನೆಡಲು ಹೆಚ್ಚಿನ ಒತ್ತು ಕೊಡಬೇಕು ಎಂದು ತಿಳಿಸಿದರು. ಆರೋಗ್ಯದ ದೃಷ್ಟಿಯಿಂದ ಯೋಚಿಸಿ ಔಷಧಿ ಗುಣದ ಸಸಿಗಳನ್ನು ಸಹ ಹೆಚ್ಚಿನ ಪ್ರಮಾಣದಲ್ಲಿ ಬೆಳೆಯುವುದು ಇಂದಿನ ಅತೀ ಅಗತ್ಯವಾಗಿದೆ. ಆಯುಷ್ ಇಲಾಖೆ, ಅರಣ್ಯ ಇಲಾಖೆಗಳು ಈ ನಿಟ್ಟಿನಲ್ಲಿ ಯೋಜನೆಗಳನ್ನು ರೂಪಿಸಿ ಅನುಷ್ಠಾನ ಗೊಳಿಸಬೇಕು. ಪರಿಸರದ ಸಂರಕ್ಷಣೆಯಲ್ಲಿ ನನ್ನ ಪಾತ್ರವು ಸಹ ಇದೆ ಎಂದು ಯೋಚಿಸಿ ಪ್ರತಿಯೊಬ್ಬರು ತಮ್ಮ ತಮ್ಮ ಮನೆ ಅಂಗಳದಲ್ಲಿ, ತಾವುಗಳು ಕೆಲಸ ಮಾಡುವ ಸ್ಥಳದಲ್ಲಿ ಕನಿಷ್ಟ ಒಂದು ಸಸಿಯನ್ನಾದರು ನೆಟ್ಟು ಅದನ್ನು ಬೆಳೆಸಿದಲ್ಲಿ ಪರಿಸರ ದಿನಾಚರಣೆಗೆ ಅರ್ಥ ಬರಲಿದೆ ಎಂದು ಸಲಹೆ ನೀಡಿದರು.

ನಮಗೆ ಜೀವ ನೀಡಿದ ನಮ್ಮ ಭೂಮಿಯನ್ನು ರಕ್ಷಿಸುವುದು ನಮ್ಮೆಲ್ಲರ ಆದ್ಯ ಕೆಲಸವಾಗಿದೆ. ನಮ್ಮ ಭೂಮಿಯನ್ನು ಸಂರಕ್ಷಿಸುವುದೆಂದರೆ ನಮ್ಮ ಭವಿಷ್ಯದ ದಿನಗಳನ್ನು ರಕ್ಷಣೆ ಮಾಡಿದಂತೆ ಎಂದು ತಿಳಿಸಿದರು.

ಉಪ ಅರಣ್ಯ ಸಂರಕ್ಷಣಾಧಿಕಾರಿ ಅರ್ಸಲನ್ ಅಧ್ಯಕ್ಷತೆವಹಿಸಿ ಮಾತನಾಡಿ, ಬರಗಾಲವನ್ನು ತಡೆಯುವ ಶಕ್ತಿ ಗಿಡಮರಗಳಿಗಿದೆ. ಮರಗಳನ್ನು ಕಡಿಯುವುದರಿಂದ, ಕಾಡಿಗೆ ಬೆಂಕಿ ಹಚ್ಚುವುದರಿಂದ ಹಾಗೂ ಇನ್ನೂ ಬೇರೆ ಬೇರೆ ಕಾರಣಾಂತರಗಳಿಂದ ನಮ್ಮ ಭೂಮಿ, ಪರಿಸರ ನಾಶವಾಗುತ್ತಿದೆ. ಆದ್ದರಿಂದ ಗಿಡಮರಗಳನ್ನು ನಾಶಮಾಡುವುದನ್ನು ತಡೆಯಬೇಕು. ಅತೀ ಹೆಚ್ಚಿನ ಪ್ರಮಾಣದಲ್ಲಿ ನಾವು ಗಿಡಮರಗಳನ್ನು ಬೆಳೆಸಿ, ಅರಣ್ಯ ಸಂಪತ್ತನ್ನು ಉಳಿಸಬೇಕು ಎಂದು ಮನವಿ ಮಾಡಿದರು.

ಮುಖ್ಯ ಅತಿಥಿಗಳಾಗಿ ಗೌರವಾನ್ವಿತ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ತಾಲೂಕು ಕಾನೂನು ಸೇವಾ ಸಮಿತಿಯ ಅಧ್ಯಕ್ಷರಾದ ಹೇಮಲತಾ ಬಿ. ಹುಲ್ಲೂರು, ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ತಾಲೂಕು ಕಾನೂನು ಸೇವಾ ಸಮಿತಿಯ ಸದಸ್ಯ ಕಾರ್ಯದರ್ಶಿಗಳಾದ ಪ್ರಶಾಂತ್ ನಾಗಲಾಪುರ, ಗೌರವಾನ್ವಿತ ಅಪರ ಸಿವಿಲ್ ನ್ಯಾಯಾಧೀಶರಾದ ಅಶೋಕ ಎಚ್.ಆರ್., ಗೌರವಾನ್ವಿತ 2ನೇ ಅಪರ ಸಿವಿಲ್ ನ್ಯಾಯಾಧೀಶರಾದ ಸಂಜೀವಕುಮಾರ್.ಜಿ, ಗೌರವಾನ್ವಿತ 3ನೇ ಅಪರ ಸಿವಿಲ್ ನ್ಯಾಯಾಧೀಶರಾದ ಚೈತ್ರ. ಜೆ., ಹೊಸಪೇಟೆ ವಕೀಲರ ಸಂಘದ ಅಧ್ಯಕ್ಷರಾದ ಕೆ. ಪ್ರಹ್ಲಾದ್, ವಕೀಲರ ಸಂಘದ ಪ್ರಧಾನ ಕಾರ್ಯದರ್ಶಿಗಳಾದ ಪಿ.ಶ್ರೀನಿವಾಸಮೂರ್ತಿ, ತೋಟಗಾರಿಕೆ ಇಲಾಖೆಯ ಉಪನಿರ್ದೇಶಕರಾದ ಚಿದಾನಂದ, ಸಹಾಯಕ ಅರಣ್ಯ ಸಂರಕ್ಷಣಾ ಅಧಿಕಾರಿ ರಾಜೇಶ ನಾಯಕ, ವಿಜಯನಗರ ವಲಯ ಅರಣ್ಯಾಧಿಕಾರಿ ಗಳಾದ ಭರತ್‌ರಾಜ್ ಎಂ.ಎ, ಜಿಲ್ಲಾ ಆಯುಷ್ ಅಧಿಕಾರಿಗಳಾದ ಸುಜಾತ ಪಾಟೀಲ, ಎನ್.ಎಂ.ಸೌದಗರ್, ಅರಣ್ಯ ಇಲಾಖೆ ಅಧಿಕಾರಿಗಳು ಹಾಗೂ ಇತರ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು. ತಾಲೂಕು ಕಾನೂನು ಸೇವಾ ಸಮಿತಿಯ ಆಡಳಿತ ಸಹಾಯಕ ಎಸ್.ಬಿ.ಕೆ ಕಮತಗಿ ಅವರು ನಿರೂಪಿಸಿದರು.

# ಜೀವಸಂಕುಲ ಉಳಿವಿಗೆ ಪರಿಸರ ಸಂರಕ್ಷಿಸಿ


### ಜಿಪಂ ಸಿಇಓ ಬಿ ಸದಾಶಿವ ಪ್ರಭು ಹೇಳಿಕೆ | ಪ್ರವಾಸೋದ್ಯಮ ಇಲಾಖೆಯಿಂದ ಪರಿಸರ ದಿನಾಚರಣೆ

**ಹಂಪಿ ಟೈಮ್ಸ್ ಹೊಸಪೇಟೆ**

ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಪ್ರವಾಸೋದ್ಯಮ ಇಲಾಖೆಯ ಸ್ವಚ್ಛತಾ ಗ್ರೀನ್ ಲೀಫ್ ಅಡಿಯಲ್ಲಿ ಹಂಪಿಯ ಕಮಲಾಪುರದ ಹೋಟೆಲ್ ಮಯೂರ ಭುವನೇಶ್ವರಿ ಆವರಣದಲ್ಲಿ ಜೂನ್ 5ರಂದು ಸಸಿ ನೆಡುವುದರ ಮೂಲಕ ವಿಶ್ವ ಪರಿಸರ ದಿನಾಚರಣೆಯನ್ನು ಆಚರಿಸಲಾಯಿತು.

ವಿಜಯನಗರ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಸದಾಶಿವ ಪ್ರಭು ಬಿ ಅವರು ಸಸಿ ನೆಡುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ಸಿಇಓ ಅವರು, ಅಮೋಘವಾದ ಪರಿಸರ ಹೊಂದಿದ ಕಾರಣಕ್ಕೆ ಹಂಪಿಯು ಪ್ರತಿಯೊಬ್ಬರನ್ನು ತನ್ನತ್ತ ಸೆಳೆಯುತ್ತಲೇ ಇದೆ. ಮನುಷ್ಯ ಸೇರಿದಂತೆ ಪ್ರತಿಯೊಂದು ಪ್ರಾಣಿ ಪಕ್ಷಿಗಳ ಸಂರಕ್ಷಣೆಯ ಹಿನ್ನೆಲೆಯಲ್ಲಿ ಈ ಭೂಮಿಯನ್ನು ಉಳಿಸುವುದು ಪ್ರತಿಯೊಬ್ಬರ




ಕರ್ತವ್ಯವಾಗಿದೆ ಎಂದು ಸಲಹೆ ಮಾಡಿದರು.

ಈ ಸಂದರ್ಭದಲ್ಲಿ ಕೆಎಸ್‌ಟಿಡಿಸಿ ಯ ವ್ಯವಸ್ಥಾಪಕ ಸುನಿಲ್‌ಕುಮಾರ್ ಎಸ್., ಜಿಲ್ಲಾ ಪ್ರವಾಸೋದ್ಯಮ ಸಮಾಲೋಚಕರಾದ ಸಾಗರ್ ಬಿ.ಡಿ., ಪ್ರವಾಸೋದ್ಯಮ ಇಲಾಖೆಯ ಶ್ರೀಹರಿ, ಪ್ರವಾಸಿ ಮಾರ್ಗದರ್ಶಿಗಳು ಹಾಗೂ ಹೋಟೆಲ್ ಮಯೂರ ಭುವನೇಶ್ವರಿಯ ಸಿಬ್ಬಂದಿ ವರ್ಗದವರು ಹಾಜರಿದ್ದರು.

# ಚಾರಣಿಗರ ಸುರಕ್ಷಿತ ರಕ್ಷಣೆ, ಮೃತ ದೇಹಗಳನ್ನು ರಾಜ್ಯಕ್ಕೆ ತುರ್ತಾಗಿ ತರಲು ಅಗತ್ಯ ಕ್ರಮಕ್ಕೆ ಸಿಎಂ ಸೂಚನೆ



**ಬೆಂಗಳೂರು:**

ಉತ್ತರಾಖಂಡದ ಶಾಸ್ತ್ರತಾಳ್ ಗೆ ಚಾರಣಕ್ಕೆಂದು ತೆರಳಿ ಹವಾಮಾನ ವೈಪರೀತ್ಯದಿಂದಾಗಿ ಮೃತಪಟ್ಟಿರುವವರ ಮೃತದೇಹಗಳನ್ನು ಕುಟುಂಬದವರಿಗೆ ತಲುಪಿಸುವ ಮತ್ತು ರಕ್ಷಿಸಲ್ಪಟ್ಟಿರುವ ಉಳಿದ ಚಾರಣಿಗರನ್ನು ಸುರಕ್ಷಿತವಾಗಿ ರಾಜ್ಯಕ್ಕೆ ಕರೆತರಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಈ ಕುರಿತಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಡೆಹ್ರಾಡೂನ್ ನಲ್ಲಿರುವ ಕಂದಾಯ ಸಚಿವ ಕೃಷ್ಣಬೈರೇಗೌಡ ಮತ್ತು ರಕ್ಷಿಸಲ್ಪಟ್ಟ ಚಾರಣಿಗರ ಜೊತೆ ದೂರವಾಣಿ ಮೂಲಕ ಮಾತನಾಡಿದರು. ಮೃತರ ಸಂಖ್ಯೆ 9 ಕ್ಕೆ ಏರಿದ ಸಂಗತಿ ತಿಳಿದು ಬಹಳ ನೋವಾಗಿದೆ. ಮೃತರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಪ್ರಾರ್ಥಿಸುತ್ತೇನೆ. ರಕ್ಷಿಸಲ್ಪಟ್ಟಿರುವ ಎಲ್ಲರನ್ನೂ ಯಾವುದೇ ಅಡಚಣೆ ಆಗದಂತೆ ಸುರಕ್ಷಿತವಾಗಿ ಮನೆಗಳಿಗೆ ಸೇರಿಸಬೇಕು. ಮೃತ ದೇಹಗಳನ್ನು ಕುಟುಂಬದವರಿಗೆ ತಲುಪಿಸುವ ನಿಟ್ಟಿನಲ್ಲೂ ಅಗತ್ಯವಾದ ಎಲ್ಲಾ ಪ್ರಕ್ರಿಯೆಗಳನ್ನು ತುರ್ತಾಗಿ ನಿರ್ವಹಿಸಬೇಕು ಎನ್ನುವ ಸೂಚನೆಗಳನ್ನು ಸಚಿವ ಕೃಷ್ಣಬೈರೇಗೌಡರಿಗೆ ನೀಡಿದ್ದಾರೆ.

ರಕ್ಷಿಸಲ್ಪಟ್ಟು ಸುರಕ್ಷಿತ ನೆಲೆಗೆ ಕರೆತರಲಾಗಿರುವ ಚಾರಣಿಗರ ಜೊತೆಗೂ ಮಾತನಾಡಿದ ಮುಖ್ಯಮಂತ್ರಿಗಳು, ಬಾಕಿ ಉಳಿದಿರುವ ಪ್ರತಿಯೊಬ್ಬರನ್ನೂ ಸುರಕ್ಷಿತವಾಗಿ ಕಾಪಾಡಿ ಕರೆತರುವ ಬಗ್ಗೆ ಸರ್ಕಾರಗಳ ಮಟ್ಟದಲ್ಲಿ ಸಕಲ ಪ್ರಯತ್ನಗಳೂ ನಡೆಯುತ್ತಿವೆ ಎಂದು ಭರವಸೆ ನೀಡಿದ್ದಾರೆ.

ಈಗಾಗಲೇ ರಕ್ಷಣಾ ಕಾರ್ಯಾಚರಣೆ ಮೂಲಕ ರಕ್ಷಿಸಲ್ಪಟ್ಟವರನ್ನು ಸುರಕ್ಷಿತ ಪ್ರದೇಶಕ್ಕೆ ವಾಪಸು ಕರೆತರಲಾಗಿದ್ದು, ಇನ್ನೂ ಕೆಲವು ಚಾರಣಿಗರ ರಕ್ಷಣೆ ಆಗಬೇಕಿದೆ. ಪ್ರತಿಕೂಲ ಹವಾಮಾನವು ರಕ್ಷಣಾ ಕಾರ್ಯಕ್ಕೆ ತೀವ್ರ ಅಡಚಣೆ ಉಂಟುಮಾಡುತ್ತಿದ್ದು, ಎಲ್ಲರನ್ನೂ ಸುರಕ್ಷಿತವಾಗಿ ಕರೆತರಲು ನಮ್ಮ ಸರ್ಕಾರವು ಶಕ್ತಿಮೀರಿ ಪ್ರಯತ್ನಿಸುತ್ತಿದೆ ಎಂದು ತಿಳಿಸಿದ್ದಾರೆ.

## ವಿಜ್ಞಾನ

# ಕುಕ್ಕರ್‌ನಲ್ಲಿನ ಗಾಳಿಯು ಏಕೆ ವೇಗವಾಗಿ ಹೊರಬರುತ್ತದೆ?

**ಆರ್.ಬಿ.ಗುರುಬಸವರಾಜ**

ಕುಕ್ಕರ್‌ನಲ್ಲಿ ಎರಡು ವಿಷಲ್ ಸೌಂಡ್ ಬಂದ ನಂತರ ಸ್ಟೌವ್ ಆಫ್ ಮಾಡು ಎಂದು ತಾಯಿ ಅಶ್ವಿನಿಗೆ ಹೇಳಿದಳು. ಅದರಂತೆ ಎರಡು ವಿಷಲ್ ಸೌಂಡ್ ಬಂದ ನಂತರ ಅಶ್ವಿನಿ ಸ್ಟೌವ್ ಆಫ್ ಮಾಡಿದಳು. ಅಲ್ಲಿಯೇ ಇದ್ದ ತಾತನಿಗೆ "ತಾತ, ಕುಕ್ಕರ್‌ನಲ್ಲಿದ್ದ ಗಾಳಿ ಯಾಕೆ ವೇಗವಾಗಿ ಹೊರಬರುತ್ತೆ. ಒಮ್ಮೆ ಗಾಳಿ ಖಾಲಿಯಾಗಿದ್ದರೂ ಮತ್ತೊಂದು ವಿಷಲ್ ಹೇಗೆ ಬರುತ್ತೆ?" ಎಂದಳು. ತಾತ ಸಮಾದಾನದಿಂದ ಅವಳ ಪ್ರಶ್ನೆಗೆ ಉತ್ತರಿಸತೊಡಗಿದರು.



ಕುಕ್ಕರ್‌ನೊಳಗಿನ ಗಾಳಿ ಯಾಕೆ ವೇಗವಾಗಿ ಹೊರಬರುತ್ತದೆ ಎಂಬುದನ್ನು ತಿಳಿಯುವ ಮುಂಚೆ ಕುಕ್ಕರ್‌ನೊಳಗೆ ಗಾಳಿ ಹೇಗೆ ಉತ್ಪತ್ತಿಯಾಗುತ್ತದೆ ಎಂಬುದನ್ನು ತಿಳಿಯುವುದು ಮುಖ್ಯ. ಕುಕ್ಕರ್ ಅನ್ನು ಅಡುಗೆ ಪಾತ್ರೆಯೊಳಗೆ ಹಬೆಯನ್ನು ಹಿಡಿದಿಟ್ಟು ಹೆಚ್ಚಿನ ಒತ್ತಡದ ವಾತಾವರಣವನ್ನು ಸೃಷ್ಟಿಸಲು ವಿನ್ಯಾಸಗೊಳಿಸಲಾಗಿದೆ. ಕುಕ್ಕರ್‌ನೊಳಗಿನ ದ್ರವವು ಬಿಸಿಯಾಗುತ್ತಿದ್ದಂತೆ, ಅದು ಕುದಿಯಲು ಮತ್ತು ಉಗಿಯನ್ನು ಉತ್ಪಾದಿಸಲು ಪ್ರಾರಂಭಿಸುತ್ತದೆ. ಕುಕ್ಕರ್‌ನ ಮುಚ್ಚಳವನ್ನು ಭದ್ರವಾಗಿ ಮುಚ್ಚಿರುವುದರಿಂದ, ಆವಿಯು ಎಲ್ಲಿಯೂ ಹೋಗುವುದಿಲ್ಲ. ಇದರಿಂದ ಕುಕ್ಕರ್ ಒಳಗೆ ಒತ್ತಡವನ್ನು ನಿರ್ಮಿಸಲು ಪ್ರಾರಂಭಿಸುತ್ತದೆ. ಕುಕ್ಕರ್ ಒಳಗೆ ಒತ್ತಡ ಹೆಚ್ಚಾದಂತೆ, ದ್ರವದ ಕುದಿಯುವ ಬಿಂದುವೂ ಹೆಚ್ಚಾಗುತ್ತದೆ. ಒತ್ತಡವು ಒಂದು ನಿರ್ದಿಷ್ಟ ಮಟ್ಟವನ್ನು ತಲುಪುವವರೆಗೆ ಹೆಚ್ಚಾಗುತ್ತದೆ. ನಿರ್ದಿಷ್ಟ ಮಟ್ಟದ ಒತ್ತಡವನ್ನು ತಡೆದುಕೊಳ್ಳಲು ಕುಕ್ಕರ್‌ನಲ್ಲಿ ಕವಾಟ ಇರುತ್ತದೆ.

ಗರಿಷ್ಟ ಮಟ್ಟದ ಒತ್ತಡ ಪಡೆದ ಕುಕ್ಕರ್‌ನಲ್ಲಿನ ಕವಾಟವು ಸ್ವಯಂ ಚಾಲಿತವಾಗಿ ತೆರೆದುಕೊಳ್ಳುತ್ತದೆ. ಇದರಿಂದ ಕುಕ್ಕರ್‌ನೊಳಗಿನ ಒತ್ತಡವು ಇದ್ದಕ್ಕಿದ್ದಂತೆ ಕಡಿಮೆಯಾಗುತ್ತದೆ. ಒತ್ತಡದ ಈ ಹಠಾತ್ ಕುಸಿತವು ಕುಕ್ಕರ್‌ನ ಒಳಗಿನ ಗಾಳಿಯನ್ನು ತ್ವರಿತವಾಗಿ ಹೊರಹಾಕಲು ಕಾರಣವಾಗುತ್ತದೆ. ಗಾಳಿಯ ಈ ಕ್ಷಿಪ್ರ ಬಿಡುಗಡೆಯೇ ಕುಕ್ಕರ್‌ನಿಂದ ಉಗಿ ಹೊರಹೋಗುವ ವಿಷಲ್ ಶಬ್ದಕ್ಕೆ ಕಾರಣವಾಗುತ್ತದೆ.

ಒಳಗಿನ ಒತ್ತಡವು ಗಾಳಿಯನ್ನು ವಿಷಲ್ ಶಬ್ದದ ರೂಪದಲ್ಲಿ ಹೊರಹಾಕಿದ ನಂತರ ಕುಕ್ಕರ್‌ನಲ್ಲಿ ಇನ್ನೂ ನೀರಿನ ಅಂಶ ಇರುವುದರಿಂದ ಪುನಃ ಒತ್ತಡ ಏರ್ಪಡಲು ಪ್ರಾರಂಭವಾಗುತ್ತದೆ. ಹೀಗೆ ಸಂಗ್ರಹವಾದ ಒತ್ತಡವು ನಿರ್ದಿಷ್ಟ ಹಂತದ ನಂತರ ಪುನಃ ವಿಷಲ್ ಶಬ್ದದ ಮೂಲಕ ಗಾಳಿಯು ವೇಗವಾಗಿ ಹೊರಬರುತ್ತದೆ. ಕುಕ್ಕರ್‌ನ್ನು ಬಳಸುವಾಗ ಅದರಲ್ಲಿನ ಹೆಚ್ಚು ಒತ್ತಡದ ಗಾಳಿಯು ಹಬೆಯ ರೂಪದಲ್ಲಿ ಹೊರಬರುವುದರಿಂದ ಹೆಚ್ಚು ಜಾಗರೂಕರಾಗಿರಬೇಕು.

# ಕೃತಜ್ಞತೆ ತಿಳಿಸಿದ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ

**ಹಂಪಿ ಟೈಮ್ಸ್ ಬಳ್ಳಾರಿ**



ಲೋಕಸಭೆ ಸಾರ್ವತ್ರಿಕ ಚುನಾವಣೆ ಸಂಬಂಧ ಬಳ್ಳಾರಿ ಲೋಕಸಭಾ ಕ್ಷೇತ್ರದಲ್ಲಿ ಕಳೆದ ಮೇ. 7 ರಂದು ಜರುಗಿದ ಮತದಾನ ಹಾಗೂ ಜೂ. 04 ರಂದು ನಡೆದ ಮತ ಎಣಿಕೆ ಕಾರ್ಯಗಳಲ್ಲಿ ಸಕ್ರಿಯಾಗಿ ತೊಡಗಿಕೊಂಡು ಸುಗಮ ಹಾಗೂ ಯಶಸ್ವಿ ಚುನಾವಣೆ ನಡೆಸಲು ಸಹಕರಿಸಿದ ಎಲ್ಲ ಇಲಾಖೆ ಅಧಿಕಾರಿಗಳು, ಪೊಲೀಸ್ ಇಲಾಖಾ ಅಧಿಕಾರಿ ಸಿಬ್ಬಂದಿಗಳು, ಸಾರ್ವಜನಿಕರು ಹಾಗೂ ಚುನಾವಣಾ ಪ್ರಕ್ರಿಯೆಗಳ ಬಗ್ಗೆ ಕಾಲಕಾಲಕ್ಕೆ ವ್ಯಾಪಕ ಪ್ರಚಾರ ನೀಡಿ ಸಹಕರಿಸಿದ ಎಲ್ಲ ಮಾಧ್ಯಮ ಪ್ರತಿನಿಧಿಗಳಿಗೆ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿಯಾದ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಧನ್ಯವಾದಗಳನ್ನು ಸಲ್ಲಿದ್ದಾರೆ.

# ವಿಜಯನಗರ ಕಾಲೇಜಿನ ಪರಿಸರ ದಿನಾಚರಣೆ




**ಹೊಸಪೇಟೆ ವಿಜಯನಗರ ಕಾಲೇಜ್‌ನಿಂದ ವಿಶ್ವಪರಿಸರ ದಿನಾಚರಣೆ ಅಂಗವಾಗಿ ಐಕ್ಯೂಎಸಿ ಮತ್ತು ಅಲೂಮ್ನಿ ಅಸೋಸಿಯೇಷನ್ ಜೀವಶಾಸ್ತ್ರ ವಿಭಾಗದಿಂದ ಸಸಿ ನೆಡುವ ಕಾರ್ಯ ನಡೆಯಿತು. ಅರಣ್ಯಾಧಿಕಾರಿ ಡಾ.ರಾಜೀವ ನಾಯ್ಕ್, ಹಳೇ ವಿದ್ಯಾರ್ಥಿ ಸಂಘದ ಅಧ್ಯಕ್ಷ ಪಿ.ಎನ್.ಶ್ರೀಪಾದ, ಕಾರ್ಯದರ್ಶಿ ವೈ.ಒಪ್ಪತ್ತೆಪ್ಪ, ಕಾರ್ಯದರ್ಶಿ ಕೆ.ಎಸ್.ಲಿಂಗಪ್ಪ, ಕಾಲೇಜು ಆಡಳಿತ ಮಂಡಳಿ ಅಧ್ಯಕ್ಷ ಎನ್.ಮಲ್ಲಿಕಾರ್ಜುನ ಮೆಟ್ರಿ, ಪ್ರಾಂಶುಪಾಲರಾದ ಡಾ.ಎಂ.ಪ್ರಭುಗೌಡ, ಎಚ್.ಎಂ.ನಿರಂಜನ, ವಿಭಾಗದ ಡಾ.ಪುಷ್ಪ ಕೆ ಇತರರು ಇದ್ದರು.**

# ಎಂಎಸ್ ಪಿಎಲ್ ಸಂಕಲ್ಪ

**ಮೊದಲ ಪುಟದಿಂದ**

ಈ ವರ್ಷವೂ ಹೊಸಪೇಟೆಯಲ್ಲಿ ಎರಡು ಸಾವಿರ ಗಿಡಗಳನ್ನು ಮತ್ತು ಗ್ರೀನ್ ಕೊಪ್ಪಳವನ್ನಾಗಿಸಲು ನಾಲ್ಕು ಸಾವಿರ ಗಿಡಗಳನ್ನು ನೆಡುವ ಗುರಿ ಹೊಂದಲಾಗಿದ್ದು, ಪ್ರತಿಯೊಬ್ಬರು ಸಹಕರಿಸಬೇಕು ಎಂದರು.

ಸರ್ಕಾರಿ ಪದವಿಪೂರ್ವ ಕಾಲೇಜ್, ಪ್ರೌಢಶಾಲಾ ಆವರಣದಲ್ಲಿ 20 ಗಿಡಗಳನ್ನು ನೆಟ್ಟು, ರಕ್ಷಾಕವಚಗಳನ್ನು ಅಳವಡಿಸಲಾಯಿತು.

ಸಮಾಜದ ಹಿರಿಯ ಮುಖಂಡರಾದ ಕೆ.ರವಿಶಂಕರ, ಎಚ್.ಶ್ರೀನಿವಾಸರಾವ್, ರೇಖಾಪ್ರಕಾಶ್, ಅನ್ನಪೂರ್ಣ, ಪ್ರಭಾಕರ ಸೇರಿದಂತೆ ಇತರರು ಇದ್ದರು.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA